# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಬುಧವಾರ, ಸೆಪ್ಟೆಂಬರ್ 18, 2024

ಸಂಪುಟ : 51 ಸಂಚಿಕೆ : 126 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಭಕ್ತರ ಸಹಕಾರದಿಂದ ಪುಣ್ಯಾಶ್ರಮ ಅಭಿವೃದ್ಧಿ

### ಶ್ರೀ ಪಂಚಾಕ್ಷರಿ ಗವಾಯಿ, ಪಂ.ಪುಟ್ಟರಾಜ ಗವಾಯಿಗಳ ಪುಣ್ಯ ಸ್ಮರಣೆಯಲ್ಲಿ ಓಂಕಾರ ಶ್ರೀ

ದಾವಣಗೆರೆ, ಸೆ.17- ಶ್ರೀ ವೀರೇಶ್ವರ ಪುಣ್ಯಾಶ್ರಮದ ಅಭಿವೃದ್ಧಿಗೆ ಭಕ್ತರ ಸಹಕಾರ ಕಾರಣ. ಭಕ್ತರು, ದಾನಿಗಳ ನೆರವಿನಿಂದ ಆಶ್ರಮ ಸಾಕಷ್ಟು ಅಭಿವೃದ್ಧಿ ಕಂಡಿದೆ ಎಂದು ಆವರಗೊಳ್ಳ ಪುರವರ್ಗಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಹೊರವಲಯ ಬಾಡಾ ಕ್ರಾಸ್ ಬಳಿ ಇರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಶ್ರೀ ಪಂಚಾಕ್ಷರಿ ಗವಾಯಿಗಳವರ 80ನೇ ಹಾಗೂ ಡಾ. ಪಂಡಿತ್ ಪುಟ್ಟರಾಜ ಕವಿ ಗವಾಯಿಗಳವರ 14 ನೇ ಪುಣ್ಯಾರಾಧನೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ದಾವಣಗೆರೆ, ಗದಗ, ಶಿವಮೊಗ್ಗದ ವೀರೇಶ್ವರ ಪುಣ್ಯಾಶ್ರಮಗಳು ಸಂಗೀತ ಸಾರಸ್ವತ ಲೋಕದ ಕಣ್ಣುಗಳಾಗಿವೆ. ಪಂಚಾಕ್ಷರಿ ಗವಾಯಿಗಳು ಮತ್ತು ಪಂಡಿತ್ ಪುಟ್ಟರಾಜ ಕವಿ ಗವಾಯಿಗಳ ಕೃಪಾಶೀರ್ವಾದ ದಿಂದ ಸಾವಿರಾರು ಕಲಾವಿದರು ಮಹಾನ್ ಪಂಡಿ ತರಾಗಿ ಹೊರಹೊಮ್ಮಿದ್ದಾರೆಂದು ಹೇಳಿದರು.

> ವೀರೇಶ್ವರ ಪುಣ್ಯಾಶ್ರಮದಲ್ಲಿ ವರ್ಷ ಪೂರ್ತಿ ದಾಸೋಹಕ್ಕೆ ದಾನಿಗಳು ಸಹಾಯ ಮಾಡುತ್ತಿದ್ದಾರೆ.
>
> - ಡಾ. ಅಥಣಿ ವೀರಣ್ಣ, ಆಶ್ರಮದ ಅಧ್ಯಕ್ಷ

ಆಶ್ರಮ ಇನ್ನಷ್ಟು ಅಭಿವೃದ್ಧಿ ಹೊಂದುವ ಮೂಲಕ ನಾಡಿನ ಅಂಧ, ಅನಾಥರು ಸಂಗೀತ, ಸಾಹಿತ್ಯ ಕಲಿತು ಉಭಯ ಗುರುಗಳ ಕೀರ್ತಿ ಬೆಳಗಿಸುವಂತಾಗಲಿ ಎಂದು ಆಶಿಸಿದರು.

ಹಾನಗಲ್ ಕುಮಾರಸ್ವಾಮಿಗಳವರ ಕೃಪಾಶೀರ್ವಾದದಿಂದ ಶ್ರೀ ಪಂಚಾಕ್ಷರಿ ಗವಾಯಿಗಳು ಈ ನಾಡಿನಾದ್ಯಂತ ಸಂಗೀತ ಪ್ರಚಾರ ಮಾಡಿದರು. ಪುಟ್ಟರಾಜ ಕವಿ ಗವಾಯಿಗಳು ಕೂಡ ಹೆಚ್ಚು ಹೆಚ್ಚು ಸಂಗೀತ ಕಾರ್ಯಕ್ರಮಗಳ ಪ್ರಚಾರ ಮಾಡುವ ಮೂಲಕ ಎಲ್ಲರ ಪ್ರೀತಿಗೆ ಪಾತ್ರರಾದರು ಎಂದರು.

ಪುಣ್ಯಾಶ್ರಮದ ಆರಂಭದ ದಿನದಿಂದ ನಿರಂತರವಾಗಿ ತಾವು ಇಲ್ಲಿ ನಡೆಯುವ ಕಾರ್ಯಕ್ರಮಗಳ ಸಾನ್ನಿಧ್ಯ ವಹಿಸುತ್ತಾ ಬರುತ್ತಿದ್ದು, ಹಾನಗಲ್ ಕುಮಾರಸ್ವಾಮಿಗಳು, ಪಂಚಾಕ್ಷರಿ ಗವಾಯಿಗಳು ಹಾಗೂ ಪುಟ್ಟರಾಜ ಕವಿ ಗವಾಯಿಗಳ ಕೃಪಾಶೀರ್ವಾದದಿಂದ ಆಶ್ರಮ ಹೆಚ್ಚು ಅಭಿವೃದ್ಧಿ ಹೊಂದುತ್ತಾ ಬರುತ್ತಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಆಶ್ರಮದ ಅಧ್ಯಕ್ಷರೂ, ಲೆಕ್ಕಪರಿಶೋಧಕರೂ ಆದ ಡಾ. ಅಥಣಿ ಎಸ್. ವೀರಣ್ಣ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಆಶ್ರಮ ಸಾಕಷ್ಟು ಬದಲಾವಣೆಯನ್ನು ಸಹ ಕಂಡಿದೆ. ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ಪ್ರಸಾದ ನಿಲಯ, ಸೇರಿದಂತೆ ಆಶ್ರಮ ಅಭಿವೃದ್ಧಿಯತ್ತ ಸಾಗುತ್ತಿದೆ ಎಂದರು.

ವರ್ಷದ 365 ದಿನಗಳ ಕಾಲ ದಾಸೋಹಕ್ಕೆ ದಾನಿಗಳು ಸಹಾಯ ಮಾಡುತ್ತಾ ಬಂದಿದ್ದಾರೆ. ದಾವಣಗೆರೆ ಸೇರಿದಂತೆ ನಾಡಿನ ಭಕ್ತರು ಇನ್ನಷ್ಟು ತನು, ಮನ, ಧನದಿಂದ ಸಹಕರಿಸಿ ಆಶ್ರಮದ ಬೆಳವಣಿಗೆಗೆ ಸಹಕರಿಸುವಂತೆ (2ನೇ ಪುಟಕ್ಕೆ)

## ಸ್ಮಾರ್ಟ್ ಸಿಟಿಯಾಗಿ ಕಲಬುರಗಿ

### ಕಲ್ಯಾಣ ಕರ್ನಾಟಕಕ್ಕೆ ಬಂಪರ್ ಕೊಡುಗೆ, ಪ್ರತ್ಯೇಕ ಸಚಿವಾಲಯ

ಕಲಬುರಗಿ, ಸೆ. 17 - ಕಲ್ಯಾಣ ಕರ್ನಾಟಕದ ಬಹು ದಿನಗಳ ಬೇಡಿಕೆಯಾದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಚಿವಾಲಯ ಸ್ಥಾಪಿಸುವುದೂ ಸೇರಿದಂತೆ, ಈ ಭಾಗದ ಅಭಿವೃದ್ಧಿಗಾಗಿ ರಾಜ್ಯ ಸಂಪುಟ ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದೆ.

ಕಲ್ಯಾಣ ಕರ್ನಾಟಕ ವಿಮೋಚನಾ ದಿನದಂದು ಕಲಬುರಗಿಯಲ್ಲಿ ನಡೆಸಲಾದ ಮುಖ್ಯಮಂತ್ರಿ ನೇತೃತ್ವದ ಸಂಪುಟ ಸಭೆಯಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಈ ಭಾಗಕ್ಕೆ ವಿಶೇಷ ಸ್ಥಾನಮಾನ ನೀಡುವ 371ಜೆ ಜಾರಿಯಾದ ಹತ್ತು ವರ್ಷ ತುಂಬಿದ ದಿನವೂ ಇದಾಗಿದೆ.

ರಾಜಧಾನಿ ಬೆಂಗಳೂರಿನ ಮಾದರಿಯಲ್ಲೇ ಕಲಬುರಗಿ ನಗರವನ್ನು ಸ್ಮಾರ್ಟ್‌ಸಿಟಿಯಾಗಿ ಅಭಿವೃದ್ಧಿಪಡಿಸಲು ಹಾಗೂ ಇದಕ್ಕಾಗಿ 1,685 ಕೋಟಿ ರೂ. ವೆಚ್ಚ ಮಾಡಲು ಸಂಪುಟ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ.



ಮುಖ್ಯಮಂತ್ರಿ ಸಿದ್ಧರಾಮಯ್ಯ ಸಂಪುಟ ಸಭೆಗೆ ಸಾರಿಗೆ ಬಸ್ಸಿನಲ್ಲಿ ಆಗಮಿಸಿದರು.

ಸರ್ಕಾರದ ಈ ನಿರ್ಧಾರದಿಂದ ಇಲ್ಲಿನ ಜನರ ಜೀವನ ಗುಣಮಟ್ಟ ಸುಧಾರಿಸಲಿದ್ದು, ಹಿಂದುಳಿದ ಜಿಲ್ಲೆಗಳಿಗೆ ಹೂಡಿಕೆಯನ್ನು ಆಕರ್ಷಿಸಲು ಸಾಧ್ಯವಾಗುತ್ತದೆ. ಇದಲ್ಲದೆ, ಕಲಬುರಗಿ ಮತ್ತು ಬಳ್ಳಾರಿ ಮಹಾ

#### ಕಲಬುರಗಿ, ಬಳ್ಳಾರಿ ಪಾಲಿಕೆಗೆ ತಲಾ 200 ಕೋಟಿ ರೂ.

ನಗರ ಪಾಲಿಕೆಗಳ ಮೂಲ ಸೌಲಭ್ಯ ಅಭಿವೃದ್ಧಿಗೆ ಪ್ರತ್ಯೇಕವಾಗಿ 200 ಕೋಟಿ ರೂ. ನೀಡಲು ನಿರ್ಧರಿಸಲಾಗಿದೆ. ಸಂಪುಟದ ನಿರ್ಧಾರಗಳ ಕುರಿತು ಮಾತನಾಡಿರುವ ಸಿದ್ದರಾಮಯ್ಯ, ನಾವು ನುಡಿದಂತೆ ನಡೆಯುವ ಮೂಲಕ ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಪ್ರತಿ ವರ್ಷ 5 ಸಾವಿರ ಕೋಟಿ ರೂ. ನೀಡುತ್ತಿದ್ದೇವೆ. ಕೇಂದ್ರ ಸರ್ಕಾರ ಈ ಭಾಗದ ಅಭಿವೃದ್ಧಿಗೆ ನಯಾ ಪೈಸೆ ನೀಡಿಲ್ಲ ಎಂದು ಟೀಕಿಸಿದರು.

ಕೇಂದ್ರ ಸರ್ಕಾರ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ 5 ಸಾವಿರ ಕೋಟಿ ರೂ. ನೀಡಬೇಕು ಎಂದು ಒತ್ತಾಯಿಸುವ ನಿರ್ಣಯವನ್ನೂ ಸಂಪುಟದಲ್ಲಿ ತೆಗೆದುಕೊಳ್ಳಲಾಗಿದೆ. (4ನೇ ಪುಟಕ್ಕೆ)

## ದೆಹಲಿ ನೂತನ ಸಿಎಂ ಆತಿಶಿ



ನವದೆಹಲಿ, ಸೆ. 17 - ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ಮುಂದಿನ ಸರ್ಕಾರ ರಚಿಸಲು ಆಮ್ ಆದ್ಮಿ ಪಾರ್ಟಿ ನಾಯಕಿ ಆತಿಶಿ ಅವರು ಅನುಮತಿ ಕೋರಿದ್ದಾರೆ.

ಸಂಪುಟ ಸಹೋದ್ಯೋಗಿಗಳ ಜೊತೆ ಲೆಫ್ಟಿನೆಂಟ್ ಗವರ್ನರ್ ಕಚೇರಿಗೆ ತೆರಳಿದ ಕೇಜ್ರಿವಾಲ್ ತಮ್ಮ ರಾಜೀನಾಮೆ ಸಲ್ಲಿಸಿದ್ದಾರೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಆತಿಶಿ, ನೂತನ ಸರ್ಕಾರ ರಚಿಸಲು ಅನುಮತಿ ಕೋರಿದ್ದೇವೆ. ನಾವು ದೆಹಲಿ ಜನರ ಹಿತ ರಕ್ಷಿಸುತ್ತೇವೆ ಎಂದಿದ್ದಾರೆ.

ಕೇಜ್ರಿವಾಲ್ ವಿರುದ್ಧ ಹುಸಿ ಪ್ರಕರಣಗಳನ್ನು ದಾಖಲಿಸಲಾಗಿದೆ. ಸುಪ್ರೀಂ ಕೋರ್ಟ್ ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿರುವ ಜೊತೆಗೆ ಕೇಂದ್ರ ಸರ್ಕಾರ ಹಾಗೂ ಅದರ ತನಿಖಾ ಸಂಸ್ಥೆಗಳನ್ನು ತರಾಟೆಗೆ ತೆಗೆದುಕೊಂಡಿದೆ ಎಂದಿದ್ದಾರೆ. ಇದಕ್ಕೂ ಮುಂಚೆ ಆಮ್ ಆದ್ಮಿ ಪಾರ್ಟಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಆತಿಶಿ ಅವರನ್ನು ನೂತನ ನಾಯಕರನ್ನಾಗಿ ಆಯ್ಕೆ ಮಾಡಲಾಯಿತು.

ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಕೇಜ್ರಿವಾಲ್ ಅವರು ಭಾನುವಾರ ಪ್ರಕಟಿಸಿದ್ದರು. ದೆಹಲಿ ವಿಧಾನಸಭೆಗೆ ಮುಂದಿನ (2ನೇ ಪುಟಕ್ಕೆ)

## 22ರಿಂದ ನೂತನ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಿಂದ ಬಸ್‌ಗಳ ಕಾರ್ಯಾಚರಣೆ

ದಾವಣಗೆರೆ, ಸೆ. 17 - ನೂತನ ನವೀಕೃತ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಿಂದ ಇದೇ ದಿನಾಂಕ 22 ರಿಂದ ಬಸ್ ಕಾರ್ಯಾಚರಣೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಚಾಲನೆ ನೀಡುವರು.

ಸ್ಮಾರ್ಟ್ ಸಿಟಿ ಲಿಮಿಟೆಡ್ ಮತ್ತು ಕ.ರಾ.ರ.ಸಾ. ನಿಗಮದ ವತಿಯಿಂದ ನಿರ್ಮಿತವಾಗಿರುವ ಪಿ.ಬಿ. ರಸ್ತೆಯ ಮರು ನಿರ್ಮಿತ ಬಸ್ ನಿಲ್ದಾಣ ಮತ್ತು ಬೇತೂರು ರಸ್ತೆಯ ನೂತನ ಮಾರ್ಗಗಳ ಬಸ್ ನಿಲ್ದಾಣದಿಂದ ಸಂಸ್ಥೆಯ ವಾಹನಗಳ ಕಾರ್ಯಾಚರಣೆ ಆರಂಭವಾಗಲಿದೆ. ಇದೇ ದಿನಾಂಕ 22 ರಿಂದ ಹೈಸ್ಕೂಲ್ ಬಸ್ ನಿಲ್ದಾಣದಿಂದ ಸಂಸ್ಥೆ ಎಲ್ಲಾ ವಾಹನಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗುವುದು ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಎನ್. ಸಿದ್ದೇಶ್ವರ್ ಹೆಬ್ಬಾರ್ ತಿಳಿಸಿದ್ದಾರೆ.

## ಬಂಗಾರದ ಆಮದು ದುಪ್ಪಟ್ಟು ಹೆಚ್ಚಳ

ನವದೆಹಲಿ, ಸೆ. 17 - ಆಗಸ್ಟ್ ತಿಂಗಳಲ್ಲಿ ಬಂಗಾರದ ಆಮದು ಎರಡು ಪಟ್ಟು ಹೆಚ್ಚಾಗಿದೆ. ಬಂಗಾರದ ಮೇಲಿನ ಸುಂಕ ಇಳಿಕೆ ಹಾಗೂ ಹಬ್ಬದ ದಿನಗಳ ಬೇಡಿಕೆ ಹಿನ್ನೆಲೆಯಲ್ಲಿ ಬಂಗಾರದ ಆಮದಿನ ಒಟ್ಟು ಮೌಲ್ಯ 10.06 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಆಗಸ್ಟ್ 2023ರಲ್ಲಿ ಬಂಗಾರದ ಆಮದು 4.93 ಶತ ಕೋಟಿ ಡಾಲರ್ ಆಗಿತ್ತು.

ಕಳ್ಳ ಸಾಗಣೆ ಹಾಗೂ ಇತರೆ ಚಟುವಟಿಕೆ ಗಳನ್ನು ಕಡಿಮೆ ಮಾಡುವ ಸಲುವಾಗಿ ಆಮದು ಮೇಲಿನ ಸುಂಕ ಇಳಿಕೆ ಮಾಡಲಾಗಿತ್ತು. ಇದರಿಂದಾಗಿ ದಾಖಲೆ ಮಟ್ಟದ ಆಮದಾಗಿದೆ ಎಂದು ವಾಣಿಜ್ಯ ಕಾರ್ಯದರ್ಶಿ ಸುನಿಲ್ ಭರ್ತವಲ್ ತಿಳಿಸಿದ್ದಾರೆ.

ಹಬ್ಬದ ದಿನಗಳ ಹಿನ್ನೆಲೆಯಲ್ಲಿ ವರ್ತಕರು ಬಂಗಾರ ಸಂಗ್ರಹವನ್ನು ಆರಂಭಿಸುತ್ತಾರೆ. ಈ ಕಾರಣದಿಂದಾಗಿ ಬೇಡಿಕೆ ಹೆಚ್ಚಾಗಿದೆ ಎಂದು ಭರ್ತವಲ್ ತಿಳಿಸಿದ್ದಾರೆ.



ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಬಂಗಾರದ ಮೇಲಿನ ತೆರಿಗೆಯನ್ನು ಶೇ.15ರಿಂದ 6ಕ್ಕೆ ಇಳಿಸಿತ್ತು. ಈ ಹಿನ್ನೆಲೆಯಲ್ಲಿ ಬಂಗಾರದ ಆಮದು ಗಣನೀಯವಾಗಿ ಏರಿಕೆಯಾಗಿದೆ.

ಇದರಿಂದಾಗಿ ದೇಶದ ವ್ಯಾಪಾರಿ ಕೊರತೆ ಆಗಸ್ಟ್ ತಿಂಗಳಲ್ಲಿ 29.65 ಶತಕೋಟಿ ಡಾಲರ್‌ಗಳಿಗೆ ತಲುಪಿತ್ತು. ಬಂಗಾರದ ಆಮದಿನಲ್ಲಿ ಭಾರತ 2ನೇ ಸ್ಥಾನದಲ್ಲಿದೆ. ಆಭರಣ ಉದ್ಯಮ ಪ್ರಮುಖವಾಗಿ ಬಂಗಾರವನ್ನು ಆಮದು ಮಾಡಿಕೊಳ್ಳುತ್ತಿದೆ.

## 20 ಲಕ್ಷ ವಿಶ್ವಕರ್ಮರಿಗೆ ಹಣಕಾಸು ಸೌಲಭ್ಯ

ಬೆಂಗಳೂರು, ಸೆ. 17 - ವಿಶ್ವಕರ್ಮ ಯೋಜನೆಯಡಿ ಈ ತಿಂಗಳ 20ರಂದು ದೇಶದ 20 ಲಕ್ಷ ವಿಶ್ವಕರ್ಮ ಸಮುದಾಯದವರಿಗೆ ಹಣಕಾಸಿನ ಸೌಲಭ್ಯ ಒದಗಿಸಲಾಗುತ್ತದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮ ದಿನವಾದ ಸೋಮವಾರದಂದು ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೋದಿ ಮತ್ತು ವಿಶ್ವಕರ್ಮ ಜಯಂತಿ ಸಂದರ್ಭದಲ್ಲಿ ಆರೋಗ್ಯ ಶಿಬಿರ, ರಕ್ತದಾನ ಶಿಬಿರ, ಸ್ವಚ್ಛತಾ ಅಭಿಯಾನ, ಚಿತ್ರಕಲಾ ಪ್ರದರ್ಶನ ಗಳನ್ನು ಏರ್ಪಡಿಸಲಾಗುತ್ತಿದೆ (2ನೇ ಪುಟಕ್ಕೆ)

## ಪ್ರತಿ ವಿಶ್ವಕರ್ಮನೂ ಅಸ್ತಿತ್ವ ಅರಿಯಬೇಕು

### ವಿಶ್ವಕರ್ಮ ಮಹೋತ್ಸವದಲ್ಲಿ ನಿವೃತ್ತ ವಾರ್ತಾಧಿಕಾರಿ ಸಿ.ಪಿ. ಮಾಯಾಚಾರಿ ಅಭಿಮತ



ದಾವಣಗೆರೆ, ಸೆ.17- ವಿಶ್ವಕರ್ಮ ಜನಾಂಗದ ಪರಂಪರೆಯು ಜಗತ್ತಿನ ಸರ್ವಾಂಗೀಣ ಬದುಕು ನಿರ್ಮಿಸಲು ಮಹತ್ತರ ಪಾತ್ರ ವಹಿಸಿದೆ ಎಂದು ನಿವೃತ್ತ ಜಿಲ್ಲಾ ವಾರ್ತಾಧಿಕಾರಿ ಸಿ.ಪಿ. ಮಾಯಾಚಾರಿ ಹೇಳಿದರು.

ವಿಶ್ವಕರ್ಮ ಸಮಾಜದ ವತಿಯಿಂದ ನಗರದ ಕಾಳಿಕಾಂಬ ದೇವಸ್ಥಾನದ ಆವರಣದಲ್ಲಿ ಮಂಗಳವಾರ ನಡೆದ ವಿಶ್ವಕರ್ಮ ಮಹೋತ್ಸವ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಅಂತರಾತ್ಮನಾದ ವಿಶ್ವಕರ್ಮ- ಪರಮೇಶ್ವರನ್ನು ಅರಿತವರು ಮೋಕ್ಷ ಹೊಂದುತ್ತಾರೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ವಿಶ್ವಕರ್ಮನೂ ಜನಾಂಗದ ಅಸ್ತಿತ್ವವನ್ನು ಅರಿಯಬೇಕು ಎಂದು ಹೇಳಿದರು. ಈ ಸಮಾಜದವರು ವಿಶ್ವಕರ್ಮ ಮಠ ಹಾಗೂ ಧಾರ್ಮಿಕ ಕೇಂದ್ರಗಳೊಂದಿಗೆ ಸಂಪರ್ಕ ಸಾಧಿಸಿ, ಧಾರ್ಮಿಕ ಪರಂಪರೆ ಉಳಿಸಬೇಕು. ಪಾಲಕರು ಮಕ್ಕಳಿಗೆ ಜನಾಂಗದ ಪರಂಪರೆ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

#### ನೆಪದ ಸರ್ಕಾರಿ ಕಾರ್ಯಕ್ರಮ ಸಮಾಜಕ್ಕೆ ಬೇಕಿಲ್ಲ..!

**ಅಧಿಕಾರಿಗಳು ಮತ್ತು ಸಚಿವರು ಕಾರ್ಯಕ್ರಮಕ್ಕೆ ಆಗಮಿಸದೇ ಇರುವುದು ಸಮಾಜಕ್ಕೆ ನೋವು ತಂದಿದೆ. ಸರ್ಕಾರ ನೆಪಕ್ಕೆ ಮಾತ್ರ ಜಯಂತಿ ಘೋಷಣೆ ಮಾಡಿದೆ. ಸರ್ಕಾರದ ಕಾರ್ಯಕ್ರಮಗಳು ನಮ್ಮ ಸಮಾಜಕ್ಕೆ ಅವಶ್ಯಕತೆಯಿಲ್ಲ. ನಾವೇ ಜಯಂತಿ ಕಾರ್ಯಕ್ರಮ ಮಾಡಿಕೊಳ್ಳುತ್ತೇವೆ ಎಂದು ಮುಖಂಡ ಜಗನ್ನಾಥ ಗುಡುಗಿದರು.**

ಗ್ರಾಮೀಣ ಭಾಗದ ವಿಶ್ವಕರ್ಮ ಪ್ರತಿಭೆಗಳನ್ನು ಸಮಾಜವು ಗುರುತಿಸಬೇಕು. ವಿಶ್ವಕರ್ಮದ ಪಂಚ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ವಿಶ್ವವಿದ್ಯಾಲಯ ಹಾಗೂ ಡಿಪ್ಲೋಮಾ ಕೋರ್ಸ್‌ಗಳು ಪ್ರಾರಂಭವಾಗಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಸಮಾಜದ ಮಕ್ಕಳು ವಿಚಾರ ದೃಷ್ಟಿಕೋನ ಬೆಳೆಸಿಕೊಂಡು ಶೈಕ್ಷಣಿಕವಾಗಿ ಮುಂದೆ ಬರಬೇಕು ಮತ್ತು ಅನ್ಯ ಸಮಾಜದೊಂದಿಗೆ ಉತ್ತಮ ಬಾಂಧವ್ಯ ಹೊಂದಬೇಕು ಎಂದು ಸಲಹೆ ನೀಡಿದರು. ವಿಶ್ವಕರ್ಮ ಸಮಾಜದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ವಿ. ಶಿವಾನಂದ ಮಾತನಾಡಿ, ರಾಜ್ಯ ಸರ್ಕಾರವು ವಿಶ್ವಕರ್ಮ ಜಯಂತಿ ಆಚರಿಸಲು ಅಧಿಕೃತವಾಗಿ ಘೋಷಿಸಿದ್ದರೂ ಕಾರ್ಯಕ್ರಮಕ್ಕೆ (2ನೇ ಪುಟಕ್ಕೆ)

## ಮಹಿಳೆಯರ ರಾತ್ರಿ ಪಾಳಿ ನಿರ್ಬಂಧಕ್ಕೆ ಸುಪ್ರೀಂ ಕೋರ್ಟ್ ಆಕ್ಷೇಪ

ನವದೆಹಲಿ, ಸೆ. 17 - ಮಹಿಳೆಯರು 12 ಗಂಟೆಗಿಂತ ಹೆಚ್ಚು ಕಾಲ ಕೆಲಸ ಮಾಡುವಂತಿಲ್ಲ ಹಾಗೂ ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸುವಂತಿಲ್ಲ ಎಂದು ಪಶ್ಚಿಮ ಬಂಗಾಳ ಸರ್ಕಾರ ನಿರ್ಬಂಧ ಹೇರಿರುವುದಕ್ಕೆ ಸುಪ್ರೀಂ ಕೋರ್ಟ್ ಆಕ್ಷೇಪಿಸಿದೆ.



ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ರಾಜ್ಯ ಸರ್ಕಾರದ ಆದೇಶಕ್ಕೆ ಅಚ್ಚರಿ ವ್ಯಕ್ತಪಡಿಸಿದೆ.

ಪುರುಷರು 12 ಗಂಟೆಗೂ ಹೆಚ್ಚು ಅವಧಿಯ ಪಾಳಿಯಲ್ಲಿ ಕೆಲಸ ಮಾಡಬಹುದಾದರೆ ಮಹಿಳಾ ವೈದ್ಯರೂ ಸಹ ಅಂಥದೇ ಅರ್ಹತೆ ಪಡೆದಿದ್ದಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮಹಿಳೆಯರು ರಾತ್ರಿ (4ನೇ ಪುಟಕ್ಕೆ)

## ಬುಲ್ಡೋಜರ್ ನ್ಯಾಯಕ್ಕೆ ಅ.1ರವರೆಗೆ ಸುಪ್ರೀಂ ತಡೆ

ನವದೆಹಲಿ, ಸೆ. 17 - ಅಕ್ಟೋಬರ್ 1ರವರೆಗೆ ಅಪರಾಧಿಕ ಪ್ರಕರಣಗಳ ಆರೋಪಿಗಳು ಸೇರಿದಂತೆ, ಯಾರದೇ ಆಸ್ತಿಗಳನ್ನು ಧ್ವಂಸ ನಡೆಸಬಾರದು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠ ಈ ಆದೇಶ ಹೊರಡಿಸಿದ್ದು, ಅಕ್ರಮವಾಗಿ ಆಸ್ತಿಗಳನ್ನು ಧ್ವಂಸಗೊಳಿಸುವುದು ಸಂವಿಧಾನದ ತತ್ವಗಳಿಗೆ ವಿರುದ್ಧವಾಗಿದೆ ಎಂದು ತಿಳಿಸಿದೆ.

ಆದರೆ, ಈ ಆದೇಶವು ಸಾರ್ವಜನಿಕ ರಸ್ತೆ, ಪುಟ್‌ಪಾತ್ ರೈಲ್ವೇ ಮತ್ತಿತರೆ (4ನೇ ಪುಟಕ್ಕೆ)

## ಸುಡಾನ್‌ನಲ್ಲಿ ಅಂತ್ಯಕಾಣದಾಗಿರುವ ಅಂತರ್ಯುದ್ಧ

ನವದೆಹಲಿ, ಸೆ. 17 - ಸುಡಾನ್‌ನಲ್ಲಿ ವಿದೇಶಿ ಶಕ್ತಿಗಳ ಕಾರಣದಿಂದ ಅಂತರ್ಯುದ್ಧ ತೀವ್ರವಾಗಿದ್ದು, ಶಾಂತಿ ಮಾರ್ಗ ಕಂಡುಕೊಳ್ಳು ವುದು ಕಠಿಣವಾಗುತ್ತಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

2023ರ ಏಪ್ರಿಲ್ ತಿಂಗಳಲ್ಲಿ ಸುಡಾನ್ ಸಶಸ್ತ್ರ ಪಡೆಗಳು ಹಾಗೂ ರ್‍ಯಾಪಿಡ್ ಸಪೋರ್ಟ್ ಫೋರ್ಸಸ್ ನಡುವೆ ತೀವ್ರ ಹೋರಾಟ ಆರಂಭವಾಗಿತ್ತು. ರಾಜಕೀಯವಾಗಿ ಅಧಿಕಾರ ಹಸ್ತಾಂತರ ವಿಫಲವಾದ ನಂತರ, ಅಧಿಕಾರ ಹಿಡಿಯಲು ಎರಡೂ ಪಡೆಗಳ ಮುಖ್ಯಸ್ಥರು ಸಂಘರ್ಷ ನಡೆಸಿದ್ದಾರೆ.

ಆನಂತರದಿಂದ ಪ್ರಾಂತೀಯ ಹಾಗೂ ಅಂತರರಾಷ್ಟ್ರೀಯ ಶಕ್ತಿಗಳು ಈ ಹೋರಾಟದಲ್ಲಿ ಧುಮುಕಿವೆ. ಎರಡೂ ಬಣಗಳಿಗೆ ಶಸ್ತ್ರಾಸ್ತ್ರ ಹಾಗೂ ಹಣ ಪೂರೈಸುತ್ತಿವೆ. ಈ ಯುದ್ಧದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ (ಯು.ಎ.ಇ.) ಹೆಚ್ಚು ಹೂಡಿಕೆ ಮಾಡಿದ ವಿದೇಶಿ ಶಕ್ತಿಯಾಗಿದೆ.



ಅಂತರ್ಯುದ್ಧ ಆರಂಭವಾದ ನಂತರ ಸುಡಾನ್ ಈಗ ವಿಶ್ವದ ಅತಿ ಕಠಿಣ ಮಾನವ ಬಿಕ್ಕಟ್ಟು ಎದುರಿಸುವ ದೇಶವಾಗಿದೆ. ಸುಡಾನ್ ಆಫ್ರಿಕಾದ ಅತಿ ದೊಡ್ಡ ಕೃಷಿ ಉತ್ಪನ್ನದ ದೇಶವಾಗಿತ್ತು. ಆಫ್ರಿಕಾಗೆ ಅಗತ್ಯವಾದ ಆಹಾರ ಪೂರೈಸಲು ಸುಡಾನ್‌ಗೆ ಸಾಧ್ಯವಾಗ ಲಿದೆ ಎಂಬ ಮಾತುಗಳೂ ಕೇಳಿ ಬರುತ್ತಿದ್ದವು. ಆದರೆ, ಸುಡಾನ್ ಈಗ ವಿಶ್ವದಲ್ಲೇ ಭೀಕರ ಕ್ಷಾಮ ಎದುರಿಸುವ ದೇಶವಾಗುತ್ತಿದೆ.

#### ದೇಶದ ಅರ್ಧಕ್ಕೂ ಹೆಚ್ಚು ಜನರಿಗೆ ತೀವ್ರ ಸಂಕಷ್ಟ

#### ವಿದೇಶಿ ಶಕ್ತಿಗಳ ಮೇಲಾಟದಿಂದ ಕೃಷಿ ಸಮೃದ್ಧ ದೇಶದಲ್ಲೀಗ ಕ್ಷಾಮ

ವಿಶ್ವ ಸಂಸ್ಥೆಯ ನಿರಾಶ್ರಿತರ ಸಂಸ್ಥೆಯ ಪ್ರಕಾರ 70 ಲಕ್ಷ ಜನರು ದೇಶದಲ್ಲಿ ಆಂತರಿಕವಾಗಿ ಸ್ಥಳಾಂತರಗೊಂಡಿದ್ದಾರೆ. 20 ಲಕ್ಷ ಜನರು ನೆರೆ ದೇಶಕ್ಕೆ ಪಲಾಯನ ಮಾಡಿದ್ದಾರೆ. 2.5 ಕೋಟಿ ಜನರಿಗೆ ತುರ್ತು ಮಾನವೀಯ ನೆರವಿನ ಅಗತ್ಯವಿದೆ. ಒಟ್ಟಾರೆ ದೇಶದ ಶೇ.60ರಷ್ಟು ಜನ (2ನೇ ಪುಟಕ್ಕೆ)


Narayana Health

ಆರ್ಥೋ ಕೇರ್

ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಆಸ್ಪತ್ರೆಯ ಕೀಲು ಮೂಳೆ ಮತ್ತು ಕೀಲು ಮರುಜೋಡಣಾ ತಜ್ಞ ವೈದ್ಯರು ಈಗ ದಾವಣಗೆರೆಯಲ್ಲಿ

ಲಕ್ಷಣಗಳು :
- ತೀವ್ರವಾದ ಮೊಣಕಾಲು ನೋವು ಮತ್ತು ಬಿಗಿತ
- ದೈನಂದಿನ ಚಟುವಟಿಕೆಯಲ್ಲಿ, ನಡೆದಾಡುವಾಗ ತೀವ್ರವಾದ ಮೊಣಕಾಲು ನೋವು
- ಮೆಟ್ಟಿಲು ಹತ್ತುವಾಗ, ಕುಳಿತುಕೊಳ್ಳುವಾಗ ಮೊಣಕಾಲಿನಲ್ಲಿ ವಿಪರೀತ ನೋವು

ಡಾ. ಚೇತನ್ ಮಠದ್
ಕೀಲು ಮೂಳೆ ಮತ್ತು ಕೀಲು ಮರುಜೋಡಣಾ ತಜ್ಞ ವೈದ್ಯರು



19ನೇ ಸೆಪ್ಟೆಂಬರ್ 2024 (ಗುರುವಾರ) ಮಧ್ಯಾಹ್ನ 2:00 ರಿಂದ 5:00 ರವರೆಗೆ
ಯುನಿಟಿ ಹೆಲ್ತ್ ಸೆಂಟರ್, ಸೈಂಟ್ ಪಾಲ್ಸ್ ಕಾನ್ವೆಂಟ್ ರಸ್ತೆ, 5ನೇ ತಿರುವು, ದಾವಣಗೆರೆ

ಸಹ್ಯಾದ್ರಿ ನಾರಾಯಣ ಆಸ್ಪತ್ರೆ
ಎನ್‌ಟಿ ರಸ್ತೆ, ಹರಕೆರೆ, ಶಿವಮೊಗ್ಗ

Take Care 88844 31388, 73494 48215

# ಕಾರ್ಯಾಚರಣೆ ದಿಕ್ಕು ತಪ್ಪಿ ನಾಗರಿಕರ ಸಾವು 30 ಸೈನಿಕರ ವಿರುದ್ಧದ ಅಪರಾಧಿಕರ ಪ್ರಕ್ರಿಯೆ ರದ್ದು

ನವದೆಹಲಿ, ಸೆ. 17 - 2021ರಲ್ಲಿ ನಾಗಾಲ್ಯಾಂಡ್‌ನಲ್ಲಿ ಉಗ್ರರ ವಿರುದ್ಧ ನಡೆಸಲಾದ ಕಾರ್ಯಾಚರಣೆ ದಿಕ್ಕು ತಪ್ಪಿ 13 ನಾಗರಿಕರು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ, 30 ಸೈನಿಕ ಸಿಬ್ಬಂದಿ ವಿರುದ್ಧ ಕೈಗೊಳ್ಳಲಾಗುತ್ತಿದ್ದ ಅಪರಾಧ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ.

ಕೇಂದ್ರ ಸರ್ಕಾರ ಸೈನಿಕರ ಅಭಿಯೋ ಜನೆಗೆ ಅನುಮತಿ ನೀಡಿದ್ದರೆ ಈ ಪ್ರಕರಣ ತಾರ್ಕಿಕ ಅಂತ್ಯ ಕಾಣಬಹುದಿತ್ತು ಎಂದು ನ್ಯಾಯಮೂರ್ತಿಗಳಾದ ವಿಕ್ರಂ ನಾಥ್ ಹಾಗೂ ಪಿ.ಬಿ. ವರಾಳೆ ಅವರನ್ನು ಒಳಗೊಂಡ ಪೀಠ ಹೇಳಿದೆ.

ಆದರೆ, ಸೈನ್ಯವು ಈ ಸೈನಿಕರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲು ತನ್ನ ಆದೇಶ ಅಡ್ಡಿಯಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸೈನಿಕ ಸಿಬ್ಬಂದಿ ವಿರುದ್ಧ ಕ್ರಮ ತೆಗೆದುಕೊಳ್ಳಲು ಕೇಂದ್ರ ಸರ್ಕಾರ ಅನುಮತಿ ನೀಡುತ್ತಿಲ್ಲ ಎಂದು ನಾಗಾಲ್ಯಾಂಡ್ ಸರ್ಕಾರ ಪ್ರತ್ಯೇಕ ಆಕ್ಷೇಪ ದಾಖಲಿಸಿತ್ತು.

ಈ ನಡುವೆ ಸುಪ್ರೀಂ ಕೋರ್ಟ್‌ನಲ್ಲಿ ಎರಡು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದ ಸೈನಿಕರ ಪತ್ನಿಯರು, ಕೇಂದ್ರ ಸರ್ಕಾರದ ಅನು ಮತಿ ಇಲ್ಲದೆ ನಾಗಾಲ್ಯಾಂಡ್ ಪೊಲೀಸರು ಪ್ರಕರಣ ದಾಖಲಿಸಿರುವುದನ್ನು ಪ್ರಶ್ನಿಸಿದ್ದರು.

ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ ಅನ್ವಯ ಸೈನಿಕರ ವಿರುದ್ಧ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಲು ಅಧಿಕಾರ ಇಲ್ಲ ಎಂದು ಪತ್ನಿಯರು ವಾದ ಮಂಡಿಸಿದ್ದರು.

ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ ಜಾರಿಯಲ್ಲಿರುವ ಪ್ರದೇಶಗಳಲ್ಲಿ ಸೈನಿಕರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಕೇಂದ್ರ ಸರ್ಕಾರದ ಅನುಮತಿ ಪಡೆಯುವುದು ಅಗತ್ಯ ಎಂದವರು ಹೇಳಿದ್ದರು.

ನಾಗಾಲ್ಯಾಂಡ್‌ನ ಒಟಿಂಗ್ ಎಂಬಲ್ಲಿ ಕಾರ್ಯಾಚರಣೆ ದಿಕ್ಕು ತಪ್ಪಿ ನಾಗರಿಕರು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸೈನಿಕ ಸಿಬ್ಬಂದಿ ವಿರುದ್ಧ ಅಭಿಯೋಜನೆಗೆ ತಾನು ಯಾವುದೇ ಅನುಮತಿ ನೀಡಿಲ್ಲ ಎಂದು ಕೇಂದ್ರ ಸರ್ಕಾರ ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ತಿಳಿಸಿತ್ತು.

ಕೇಂದ್ರ ಸರ್ಕಾರ ಅನುಮತಿ ನಿರಾಕರಿಸಿರುವುದನ್ನು ಪ್ರಶ್ನಿಸಿ, ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು. ಸೈನಿಕ ಸಿಬ್ಬಂದಿ ವಿರುದ್ಧ ಸ್ಪಷ್ಟ ಸಾಕ್ಷಿಗಳಿದ್ದರೂ ಸಹ ಕೇಂದ್ರ ಸರ್ಕಾರ ಅಭಿ ಯೋಜನೆಗೆ ಅನುಮತಿ ನೀಡುತ್ತಿಲ್ಲ ಎಂದು ನಾಗಾಲ್ಯಾಂಡ್ ಸರ್ಕಾರ ಹೇಳಿತ್ತು.

# ಪ್ರತಿ ವಿಶ್ವಕರ್ಮನೂ ಅಸ್ತಿತ್ವ ಅರಿಯಬೇಕು



(1ನೇ ಪುಟದಿಂದ) ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಗೈರಾಗಿರುವುದು ಸಮಾಜ ಬಾಂಧವರಿಗೆ ಬೇಸರ ತಂದಿದೆ ಎಂದರು.

ಅಂತರವಳ್ಳಿ ಮಠದ ಭಾಸ್ಕರ ಸ್ವಾಮೀಜಿ ಮಾತನಾಡಿ, ವಿಶ್ವಕರ್ಮ ಸಮಾಜವು ಹಿಂದುಳಿದಿದೆ. ಸರ್ಕಾರದಿಂದ ಸಿಗಬೇಕಾದ ಸವಲತ್ತು ಸಿಗುತ್ತಿಲ್ಲ. ಆದ್ದರಿಂದ ನಮ್ಮ ಜನಾಂಗವು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಹೇಳಿದರು.

ವೇದಿಕೆ ಕಾರ್ಯಕ್ರಮ ಬಳಿಕ ಬಂಗಾರದ ರಥದಲ್ಲಿ ವಿಶ್ವಕರ್ಮ ಮೂರ್ತಿಯ ಮೆರವಣಿಗೆ ಸಾಗಿತು. ಕುಂಭೋತ್ಸವ, ನಂದಿಕೋಲು ಕುಣಿತ, ಡಿಜೆ ಹಾಗೂ ಸ್ತಬ್ಧ ಚಿತ್ರ ಮೆರವಣಿಗೆಯಲ್ಲಿ ಕಂಡು ಬಂದವು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರವಿಚಂದ್ರ, ಸಮಾಜದ ಅಧ್ಯಕ್ಷ ಬಸಾಪುರದ ನಾಗೇಂದ್ರಾಚಾರ್, ಗೌರವಾಧ್ಯಕ್ಷ ಎನ್. ಪೂರ್ವಾಚಾರ್, ಸಿದ್ದಾಚಾರ್, ಪರಮೇಶ್ವರಾಚಾರ್, ಆನಂದ ಮತ್ತು ಸಮಾಜದ ಮುಖಂಡರು ಇದ್ದರು.

# ಮೋದಿ ಹುಟ್ಟುಹಬ್ಬದ ಪ್ರಯುಕ್ತ ಬಿಜೆಪಿಯಿಂದ ಸೇವಾ ಕಾರ್ಯ



ಹೊನ್ನಾಳಿ, ಸೆ. 17 - ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ನಿಮಿತ್ತ ಬಿಜೆಪಿ ವತಿಯಿಂದ 15 ದಿನಗಳ ಕಾಲ ಸೇವಾ ಪಾಕ್ಷಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಮಂಡಲದ ಮಾಜಿ ತಾಲ್ಲೂಕು ಅಧ್ಯಕ್ಷ ಎ.ಬಿ. ಹನುಮಂತಪ್ಪ ತಿಳಿಸಿದರು.

ನರೇಂದ್ರ ಮೋದೀಜಿಯವರ ಹುಟ್ಟುಹಬ್ಬದ ಪ್ರಯುಕ್ತ ಪಕ್ಷದ ವತಿಯಿಂದ ಸೇವಾ ಕಾರ್ಯದ ಅಂಗವಾಗಿ ತಾಲ್ಲೂಕಿನ ಮಾಸಡಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಗುಂಡಿ ಮುಚ್ಚುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನರೇಂದ್ರ ಮೋದಿಯವರ ಹುಟ್ಟುಹಬ್ಬದ ಪ್ರಯುಕ್ತ ಸೇವಾ ಕಾರ್ಯದ ಅಂಗವಾಗಿ ಮಾಸಡಿ ಮುಖ್ಯ ರಸ್ತೆಯಲ್ಲಿನ ಗುಂಡಿಗಳಿಂದ ವಾಹನ ಸವಾರರಿಗೆ ಸಮಸ್ಯೆಗಳುಂಟಾಗುತ್ತಿದ್ದು, ಈ ಗುಂಡಿಗಳಿಂದ ಅನೇಕ ರಸ್ತೆ ಅಪಘಾತಗಳೂ ಕೂಡ ಸಂಭವಿಸಿವೆ. ಸುಗಮ ಸಂಚಾರಕ್ಕಾಗಿ ರಸ್ತೆಯ ಗುಂಡಿಗಳನ್ನು ಮುಚ್ಚುವ ಕೆಲಸವನ್ನು ಮಾಡುತ್ತಿದ್ದು, ಜೊತೆಗೆ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿನ ಸಿಬ್ಬಂದಿ ಮತ್ತು ಒಳರೋಗಿಗಳಿಗೆ ಹಣ್ಣು, ಬ್ರೆಡ್, ಬಿಸ್ಕೆಟ್ ವಿತರಿಸಲಾಯಿತು ಎಂದು ಅವರು ಹೇಳಿದರು.

ಬಿಜೆಪಿ ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಾಂತರಾಜ್ ಪಾಟೀಲ್ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಹತ್ತಿರ ರಸ್ತೆಯಲ್ಲಿನ ಗುಂಡಿಗಳನ್ನೂ ಮುಚ್ಚಲೂ ಕೂಡ ಹಣವಿಲ್ಲ, ಈ ರಸ್ತೆಯಲ್ಲಿನ ಗುಂಡಿಗಳಿಂದ ದಿನ ನಿತ್ಯ ಒಂದಿಲ್ಲೊಂದು ಕಡೆ ವಾಹನ ಸವಾರರು ತಮ್ಮ ಪ್ರಾಣ ಕೈ ಚೆಲ್ಲುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಜಿ.ಪಂ. ಉಪಾಧ್ಯಕ್ಷ ಕೆ.ವಿ. ಚನ್ನಪ್ಪ ಮತ್ತು ಮಾಜಿ ಜಿ.ಪಂ. ಸದಸ್ಯ ಎಂ.ಆರ್. ಮಹೇಶ್ ಮಾತನಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿ ಸಿ.ಕೆ. ರವಿ, ಮಾಜಿ ಜಿ.ಪಂ. ಅಧ್ಯಕ್ಷ ದೀಪಾ ಜಗದೀಶ್, ಮುಖಂಡ ಟಿ.ಎಸ್. ಜಗದೀಶ್, ಬಳ್ಳೇಶ್ವರದ ಹಾಲೇಶಣ್ಣ, ಮಲ್ಲಣ್ಣ, ಎಚ್.ಎಂ. ಪಾಟೀಲ್, ಪ್ರಭು ಸೋಗಿಲು, ಎಸ್.ಎಮ್.ಟಿ. ಶಿವು, ಚನ್ನೇಶ್ ಮತ್ತಿತರರು ಉಪಸ್ಥಿತರಿದ್ದರು.

# ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಅನಂತನ ಹುಣ್ಣಿಮೆ



ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಅನಂತನ ಹುಣ್ಣಿಮೆ ಪ್ರಯುಕ್ತ ಇಂದು ನವಗ್ರಹ ಹೋಮ, ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಗೀತಮ್ಮ ಮತ್ತು ಟಿ. ಚಂದ್ರಶೇಖರ್ ಹೊಸಕುಂದುವಾಡ ಹಾಗೂ ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ದೆಹಲಿ ನೂತನ ಸಿಎಂ ಆತಿಶಿ

**(1ನೇ ಪುಟದಿಂದ)** ವರ್ಷ ಫೆಬ್ರವರಿ ತಿಂಗಳಲ್ಲಿ ಚುನಾವಣೆ ನಡೆಯಬೇಕಿದೆ. ಆದರೆ ಈ ವರ್ಷ ನವೆಂಬರ್ ತಿಂಗಳಲ್ಲಿ ಮಹಾರಾಷ್ಟ್ರದ ಜೊತೆಗೆ ಚುನಾವಣೆ ನಡೆಸುವಂತೆ ಕೇಜ್ರಿವಾಲ್ ಅವರು ಒತ್ತಾಯಿಸಿದ್ದಾರೆ.

# ವಿನೂತನದಿಂದ ಶಿಕ್ಷಕರ ದಿನಾಚರಣೆ



ದಾವಣಗೆರೆ, ಸೆ. 17- ಇಲ್ಲಿನ ವಿದ್ಯಾನಗರ ವಿನಾಯಕ ಬಡಾವಣೆಯ ವಿನೂತನ ಮಹಿಳಾ ಸಮಾಜದಲ್ಲಿ ಮಾಸಿಕ ಸಭೆ ಹಾಗೂ ಶಿಕ್ಷಕರ ದಿನವನ್ನು ಆಚರಿಸಲಾಯಿತು. ರೇಖಾ ಓಂಕಾರಪ್ಪ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಶಿಕ್ಷಕಿ ಶ್ರೀಮತಿ ಆಶಾ ಪ್ರಭಾಕರ್ ಅವರನ್ನು ಸನ್ಮಾನಿಸಲಾಯಿತು.

ವಾಣಿ ರಾಜ್ ಕಾರ್ಯಕ್ರಮ ನಿರೂಪಿಸಿದರು. ಶೈಲಾಜ ತಿಮ್ಮೇಶ್ ಪ್ರಾರ್ಥಿಸಿದರು. ಕಲ್ಪನಾ ವಿನಾಯಕ ಸ್ವಾಗತಿಸಿದರು. ರೂಪಾ ಶಂಕರ ಮೂರ್ತಿ ಅತಿಥಿಗಳನ್ನು ಪರಿಚಯಿಸಿದರು. ಸಭೆಯಲ್ಲಿ ರಂಜಿತ ಕುಮಾರ್, ವಿನೋದ ಶಿವು ಕುಮಾರ್ ಹಾಗೂ ಇತರರು ಉಪಸ್ಥಿತರಿದ್ದರು.

# ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ ಖಂಡಿಸಿ ಬಿಜೆಪಿ ಪ್ರತಿಭಟನೆ




ಹೊನ್ನಾಳಿ, ಸೆ. 17- ಮುಖ್ಯಮಂತ್ರಿ ಸಿದ್ಧರಾಮಯ್ಯ ಹಿಂದುಳಿದ ವರ್ಗಗಳ ನಾಯಕರೆಂಬ ಬೆಂಬಲವಿದೆಯಾದರೂ, ಅವರ ಮೇಲಿರುವ ಮೂಡ ಹಗರಣದ ಆರೋಪ ಸೇರಿದಂತೆ ಭ್ರಷ್ಟಾಚಾರದ ಆಡಳಿತ ನಡೆಸಲು ಮುಂದಾಗಿರುವುದಕ್ಕೆ ಬೆಂಬಲಿಸಲಾಗದು ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಹೊನ್ನಾಳಿ ಹಾಗೂ ನ್ಯಾಮತಿ ಅವಳಿ ತಾಲೂಕು ಬಿಜೆಪಿ ಹಮ್ಮಿಕೊಂಡಿದ್ದ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತದ ವೈಫಲ್ಯ, ರಾಜ್ಯ ಸರ್ಕಾರದ ಹಗರಣ, ಬೆಲೆ ಏರಿಕೆ, ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ, ಸ್ಟ್ಯಾಂಪ್ ಡ್ಯುಟಿ , ಬೆಲೆ ಏರಿಕೆ ಖಂಡಿಸಿ ಪಟ್ಟಣದ ಪುವಾಸಿ ಮಂದಿರದಿಂದ ತಾಲೂಕು ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ, ತಹಶೀಲ್ದಾರ ಪಟ್ಟರಾಜ ಗೌಡರಿಗೆ ಮನವಿ ಸಲ್ಲಿಸಿದ ಸಂದರ್ಭದಲ್ಲಿ ಮಾತನಾಡಿದರು.

ಹಾಲಿನ ಪ್ರೋತ್ಸಾಹ ಧನ ಸುಮಾರು 800 ಕೋಟಿ ರೂ.ಬಿಡುಗಡೆಯಾಗಿಲ್ಲ. ಈ ನಡುವೆ ಹಾಲಿನ ದರ ಏರಿಕೆಯಾಗಿದ್ದರೂ, ಅನೇಕರಿಗೆ ಹಣ ತಲುಪಿಲ್ಲ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಅತಿವೃಷ್ಟಿ ವೇಳೆ ಬಿದ್ದ ಮನೆಗಳಿಗೆ 95 ಸಾವಿರ, 3 ಹಾಗೂ 5 ಲಕ್ಷ ಹಣ ಬಿಡುಗಡೆ ಮಾಡಿಸಿದ್ದೆ.ಇನ್ನೂ ಮಳೆಯಿಂದ ಸಾವಿರಾರು ಎಕರೆ ಬೆಳೆ ನಾಶವಾಗಿದೆ. ಅದಕ್ಕೂ ಸಕಾಲದಲ್ಲಿ ಬೆಳ ಪರಿಹಾರ ನೀಡಿಲ್ಲ ಎಂದು ಗುಡುಗಿದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ಮಾತನಾಡಿ, ದಲಿತರ ಪರ ಎನ್ನುವ ಕಾಂಗ್ರೆಸ್ ಸರ್ಕಾರ ಎಸ್.ಸಿ.ಎಸ್.ಟಿ ಅಹುದಾನವನ್ನು ಬೇರೆ ಕಾರಣಗಳಿಗೆ ಉಪಯೋಗಿಸಿಕೊಂಡಿದ್ದಾರೆ, ಇವರದು ದಲಿತ ವಿರೋಧಿ ಆಡಳಿತವಾಗಿದೆ ಎಂದು ವ್ಯಂಗ್ಯವಾಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೇಬಾಳು, ಕಾರ್ಯದರ್ಶಿ ಅನಿಲ್ ನಾಯ್ಕ, ತಾಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ.ಸುರೇಶ್, ರಾಜ್ಯ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಕುಬೇರಪ್ಪ ಮಾತನಾಡಿದರು.

ತಾಲೂಕು ಬಿಜೆಪಿ ಮುಖಂಡರಾದ ಅರಕೆರೆ ನಾಗರಾಜ್, ಸಿ. ಆನಂದ್, ಬೆನಕನಹಳ್ಳಿ ಮಹೇಂದ್ರ, ರಮೇಶ್ ತರಗನಹಳ್ಳಿ, ನ್ಯಾಮತಿ ರವಿಕುಮಾರ್, ಪುರಸಭೆ ಮಾಜಿ ಅಧ್ಯಕ್ಷರಾದ ರಂಗನಾಥ್, ಬಾಬು ಹೋಬಳದಾರ, ಮಹೇಶ್ ಹುಡೇದ್, ಮಂಜುನಾಥ್, ಇಂಚರ, ಕುಳಗಟ್ಟೆ ರಂಗನಾಥ್, ಸುರೇಂದ್ರನಾಯ್ಕ್ ಮತ್ತಿತರರಿದ್ದರು.



# ಎಲೆಬೇತೂರಿನಲ್ಲಿ 11 ವರ್ಷದ ಗಜಕರ್ಣನಿಗೆ ಅದ್ಧೂರಿ ಮೆರವಣಿಗೆ

ದಾವಣಗೆರೆ, ಸೆ. 17 - ಇಲ್ಲಿಗೆ ಸಮೀಪದ ಎಲೆಬೇತೂರು ಗ್ರಾಮದ ಶ್ರೀ ಗಜಕರ್ಣ ಫ್ರೆಂಡ್ಸ್ ಗ್ರೂಪ್ ವತಿಯಿಂದ ಮಂಗಳವಾರ ಹನ್ನೊಂದನೇ ದಿನದ ಗಣಪತಿ ಮೂರ್ತಿ ವಿಸರ್ಜಿಸಲಾಯಿತು. ಮಂಗಳೂರಿನ ಶ್ರೀ ಗುರು ಸಿಂಗಾರಿ ಚಂಡೆ ಮೇಳ ಹಾಗೂ ಡಿಜೆ ಹಾಡಿಗೆ ಕುಣಿದ ಯುವಕ, ಯುವತಿಯರು ನೋಡುಗರನ್ನು ಆಕರ್ಷಿಸಿದರು.

ಶ್ರೀ ಗಣಪತಿಗೆ ಸಂಜೆ ಪೂಜೆ ಸಲ್ಲಿಸಿ ಮಹಾಮಂಗಳಾರತಿ ನಂತರ ಗಣೇಶ ವಿಗ್ರಹವಿದ್ದ ಟ್ರ್ಯಾಕ್ಟರ್, ಊರಿನ ಪ್ರಮುಖ ಬೀದಿಗಳಲ್ಲಿ ಮೆಲ್ಲಗೆ ಸಾಗತೊಡಗಿತು. ಕೇಸರಿ ಶಾಲು ಹಾಗೂ ಹಳದಿ ಕುರ್ತಾ, ಪೈಜಾಮ ಧರಿಸಿದ ಯುವಕ, ಯುವತಿಯರು ಶ್ರೀ ವಿಘ್ನೇಶ್ವರನಿಗೆ ಜಯಘೋಷಣೆ ಕೂಗುತ್ತಾ ಚಂಡೆ ಮೇಳಕ್ಕೆ ಮೈ ಕುಣಿಸುತ್ತಿದ್ದರು. ಮೆರವಣಿಗೆ ಸಾಗುವ ಇಕ್ಕೆಲಗಳಲ್ಲಿ ಸಾರ್ವಜನಿಕರು ಮೆರವಣಿಗೆ ನೋಡಿ ಕಣ್ತುಂಬಿಕೊಂಡರು.

ಶ್ರೀ ಸವಗದ್ದಿಗೆ ಸಂಗಮೇಶ್ವರ ಸರ್ಕಲ್ ಮೂಲಕ ಸಾಗಿ ರಾಂಪುರ ಸಮೀಪ ಇರುವ ಚಾನಲ್‌ನಲ್ಲಿ ಶ್ರೀ ಗಣಪತಿಯನ್ನು ವಿಸರ್ಜಿಸಲಾಯಿತು.

# ಭಕ್ತರ ಸಹಕಾರದಿಂದ ಪುಣ್ಯಾಶ್ರಮ ಅಭಿವೃದ್ಧಿ

**(1ನೇ ಪುಟದಿಂದ)** ಮನವಿ ಮಾಡಿದರು.

ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್, ಪಾಲಿಕೆ ಸದಸ್ಯ ಪಾಮೇನಹಳ್ಳಿ ನಾಗರಾಜ್, ಶಿವಬಸಯ್ಯ ಚರಂತಿಮಠ, ಆಶ್ರಮದ ಕಾರ್ಯದರ್ಶಿ ಜಾಲಿಮರದ ಕರಿಬಸಪ್ಪ, ಅಮರಯ್ಯಸ್ವಾಮಿ, ಸುರೇಶ್ ಕೊಪ್ಪಳ, ಬಸವನಗೌಡ, ಚನ್ನವೀರಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಇದೇ ವೇಳೆ ಮೃತ್ಯುಂಜಯ ಶೆಟ್ರು, ದೊಡ್ಡಯ್ಯ ಗವಾಯಿಗಳು, ಶಿವಬಸಯ್ಯ ಚರಂತಿ ಮಠ, ಆನಂದ ಕುಮಾರ್ ಪಾಟೀಲ್, ಡಾ. ಅಶೋಕ ಹುಗ್ಗಣ್ಣನವರ, ಮೃತ್ಯುಂಜಯ ಮಠದ, ಲಲಿತ ಗದಗ, ವಿರೂಪಾಕ್ಷಯ್ಯ ಗುಡೂರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಶ್ರೀ ವೀರೇಶ್ವರ ಪುಣ್ಯಾಶ್ರಮದಿಂದ ಆಂಜನೇಯ ಮಿಲ್‌ವರೆಗೆ ಶ್ರೀ ಪಂಚಾಕ್ಷರಿ ಗವಾಯಿಗಳ ಹಾಗೂ ಡಾ. ಪಂಡಿತ್ ಪುಟ್ಟರಾಜ ಕವಿ ಗವಾಯಿಗಳವರ ಭಾವಚಿತ್ರ ಮೆರವಣಿಗೆಯನ್ನು ಮಾಡಲಾಯಿತು.

# ಸುಡಾನ್‌ನಲ್ಲಿ ಅಂತ್ಯಕಾಣದಾಗಿರುವ ಅಂತರ್ಯುದ್ಧ

**(1ನೇ ಪುಟದಿಂದ)** ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಏಪ್ರಿಲ್ 2023ರಲ್ಲಿ ಸಮರ ಆರಂಭವಾದ ನಂತರ 20 ಸಾವಿರಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ.

ಇಷ್ಟಾದರೂ, ಶಾಂತಿ ನೆಲೆಗೊಳ್ಳುವ ದಿನಗಳ ಸಾಧ್ಯತೆ ಕಂಡು ಬರುತ್ತಿಲ್ಲ. ಹೋರಾಟ ತಗ್ಗುವ ಯಾವುದೇ ಸೂಚನೆ ಕಾಣುತ್ತಿಲ್ಲ. ಶಾಂತಿ ನೆಲೆಗೊಳಿಸುವ ಮಾತುಕತೆಗಳು ವಿಫಲವಾಗಿವೆ. ವಿದೇಶಿ ಶಕ್ತಿಗಳ ಮಧ್ಯ ಪ್ರವೇಶದಿಂದ ಹಿಂಸಾಚಾರ ಮುಂದುವರೆಯುತ್ತಿದೆ.

ಪ್ರಾಂತೀಯ ಶಕ್ತಿಗಳು ಹಾಗೂ ನೆರೆಹೊರೆ ದೇಶಗಳು ಸಂಘರ್ಷದಲ್ಲಿ ತೊಡಗಿರುವ ಇಬ್ಬರು ಜನರಲ್‌ಗಳಿಗೆ ಬೆಂಬಲಿಸುತ್ತಿದ್ದಾರೆ.

ಸುಡಾನ್ ಸಶಸ್ತ್ರ ಪಡೆಯ ಮುಖ್ಯಸ್ಥ ಅಬ್ದೆಲ್ ಫತಾಹ್ ಅಲ್ - ಬುರ್ಹಾನ್ ಹಾಗೂ ಅರೆಸೇನಾ ಪಡೆಯಾದ ರ್‍ಯಾಪಿಡ್ ಸಪೋರ್ಟ್ ಫೋರ್ಸಸ್ ಮುಖ್ಯಸ್ಥ ಮೊಹಮ್ಮದ್ ಡಗಾಲೋ ಅವರು ಹೋರಾಟದಿಂದ ಹಿಂದೆ ಸರಿಯುತ್ತಿಲ್ಲ.

ಉಭಯರು ಸಮರ ಅಪರಾಧ, ಜನಾಂಗೀಯ ಹತ್ಯಾಕಾಂಡ ಹಾಗೂ ಮಾನವೀಯತೆಯ ವಿರುದ್ಧದ ಹಿಂಸೆಯಲ್ಲಿ ತೊಡಗಿದ್ದಾರೆ ಎಂದು ವಿಶ್ವಸಂಸ್ಥೆ ಆರೋಪಿಸಿದೆ.

ಸುಡಾನ್ ಸುತ್ತ ಶಸ್ತ್ರಾಸ್ತ್ರ ಕಳ್ಳಸಾಗಣೆಯ ಜಾಲ ಹರಡಿದೆ. ಲಿಬ್ಯಾ, ಚಾಡ್ ಹಾಗೂ ಸೆಂಟ್ರಲ್ ಆಫ್ರಿಕಾ ರಿಪಬ್ಲಿಕ್ ಮೂಲಕ ಸುಡಾನ್‌ಗೆ ಶಸ್ತ್ರಗಳ ಕಳ್ಳ ಸಾಗಣೆ ಮಾಡಲಾಗುತ್ತಿದೆ. ಯು.ಎ.ಇ. ಹಾಗೂ ಇರಾನ್‌ಗಳು ಈ ದೇಶಗಳ ಮೂಲಕ ಶಸ್ತ್ರಗಳನ್ನು ರವಾನೆ ಮಾಡುತ್ತಿವೆ. ಸುಡಾನ್ ಮೇಲೆ ವಿಶ್ವಸಂಸ್ಥೆ ಹೇರಿರುವ ಶಸ್ತ್ರಾಸ್ತ್ರ ನಿರ್ಬಂಧಗಳನ್ನು ಉಲ್ಲಂಘಿಸುತ್ತಿವೆ.



ಈಜಿಪ್ಟ್ ಹಾಗೂ ಸೌದಿ ಅರೇಬಿಯಾಗಳು ಸುಡಾನ್ ಸೈನ್ಯ ಬೆಂಬಲಿಸುತ್ತಿವೆ. ಯು.ಎ.ಇ., ಲಿಬ್ಯಾ ಹಾಗೂ ರಷ್ಯಾದ ವ್ಯಾಗ್ನರ್ ಗ್ರೂಪ್‌ಗಳು ಅರೆಸೇನಾ ಪಡೆಯನ್ನು ಬೆಂಬಲಿಸುತ್ತಿವೆ.

ಸುಡಾನ್‌ನಲ್ಲಿ ಯು.ಎ.ಇ. ಅತಿ ಹೆಚ್ಚು ಹೂಡಿಕೆ ಮಾಡಿದೆ. ಸಂಪನ್ಮೂಲದಿಂದ ಸಮೃದ್ಧವಾದ ಹಾಗೂ ವ್ಯೂಹಾತ್ಮಕವಾಗಿ ಪ್ರಮುಖವಾಗಿರುವ ಸುಡಾನ್ ಮೂಲಕ ಮಧ್ಯ ಪ್ರಾಚ್ಯ ಹಾಗೂ ಪೂರ್ವ ಆಫ್ರಿಕಾದಲ್ಲಿ ತನ್ನ ಪ್ರಭಾವ ಹೆಚ್ಚಿಸಿಕೊಳ್ಳಬಹುದು ಎಂದು ಯು.ಎ.ಇ. ಭಾವಿಸಿದೆ.

2018ರ ನಂತರ ಯು.ಎ.ಇ. ಈ ದೇಶದಲ್ಲಿ ಸುಮಾರು 6 ಶತಕೋಟಿ ಡಾಲರ್ ಹೂಡಿಕೆ ಮಾಡಿದೆ. ಸುಡಾನ್ ಕೇಂದ್ರ ಬ್ಯಾಂಕ್, ಕೃಷಿ ಯೋಜನೆ ಹಾಗೂ ಕೆಂಪು ಸಮುದ್ರ ಬಂದರ್‌ನಲ್ಲಿ ಹೂಡಿಕೆ ಮಾಡಲಾಗಿದೆ. ತನ್ನ ಆಹಾರ ಭದ್ರತೆಗಾಗಿ ಸುಡಾನ್‌ನಲ್ಲಿ ಯುಎಇ ಸಾಕಷ್ಟು ಹಣ ತೊಡಗಿಸಿದೆ.

ಇದರ ಜೊತೆಗೆ ಸುಡಾನ್‌ನಿಂದ ಹೋರಾಟಗಾರರನ್ನು ನೇಮಿಸಿಕೊಂಡಿದೆ. ಇವರಲ್ಲಿ ಬಹುತೇಕರು ಅರೆಸೇನಾ ಪಡೆಗೆ ಸೇರಿದವರಾಗಿದ್ದಾರೆ. ಇವರು ಯೆಮನ್‌ನಲ್ಲಿ ಸಂಘರ್ಷ ನಡೆಸುತ್ತಿದ್ದಾರೆ. ಅರೆ ಸೇನಾ ಪಡೆಗೆ ನೆರವು ನೀಡುತ್ತಿಲ್ಲ ಎಂದು ಯು.ಎ.ಇ. ಹೇಳುತ್ತಿದೆ. ಆದರೆ, ಸಾಕ್ಷಿಗಳು ಇದಕ್ಕೆ ತದ್ವಿರುದ್ಧವಾಗಿವೆ.


2017ರಿಂದಲೂ ರಷ್ಯಾದ ವ್ಯಾಗ್ನರ್ ಗ್ರೂಪ್ ಸುಡಾನ್‌ನಲ್ಲಿ ಸಕ್ರಿಯವಾಗಿದೆ. ಡರ್ಫುರ್ ರೀತಿಯ ಪ್ರಾಂತ್ಯಗಳಲ್ಲಿನ ಯೋಜನೆಗಳಲ್ಲಿ ವ್ಯಾಗ್ನರ್ ಗ್ರೂಪ್ ಭಾಗಿಯಾಗಿದೆ.

ಸುಡಾನ್‌ನಲ್ಲಿ ಸದ್ಯಕ್ಕೆ ಆಂತರಿಕ ಸಂಘರ್ಷ ನಿಲ್ಲುವ ಯಾವುದೇ ಸೂಚನೆಗಳು ಕಂಡು ಬರುತ್ತಿಲ್ಲ. ಇದು ಆಂತರಿಕ ಬಿಕ್ಕಟ್ಟಿನ ಜೊತೆಗೆ, ಹೊರಗಿನ ಶಕ್ತಿಗಳ ಮಧ್ಯ ಪ್ರವೇಶದ ಬಿಕ್ಕಟ್ಟೂ ಆಗಿದೆ. ಹೊರಗಿನ ಶಕ್ತಿಗಳ ಹಸ್ತಕ್ಷೇಪ ನಿಲ್ಲುವವರೆಗೆ ಮಾನವೀಯ ಬಿಕ್ಕಟ್ಟು ಶಮನವಾಗುವ ಸಾಧ್ಯತೆ ಇಲ್ಲ. ಸುಡಾನ್‌ನ ಮಾನವೀಯ ಬಿಕ್ಕಟ್ಟು ದಶಕಗಳವರೆಗೆ ಪರಿಣಾಮ ಬೀರಿದರೂ ಅಚ್ಚರಿ ಪಡಬೇಕಿಲ್ಲ.

# 20 ಲಕ್ಷ ವಿಶ್ವಕರ್ಮರಿಗೆ ಹಣಕಾಸು ಸೌಲಭ್ಯ

**(1ನೇ ಪುಟದಿಂದ)** ಎಂದರು. ಗುಜರಾತ್ ಮುಖ್ಯಮಂತ್ರಿ ಮತ್ತು ದೇಶದ ಪ್ರಧಾನಿಯಾಗಿ 25 ವರ್ಷಗಳಿಂದ ಮೋದಿ ಅವರು ಬಡವರಿಗಾಗಿ ಸೇವೆ ಮಾಡಿದ್ದಾರೆ. ಮಹಿಳೆಯರ ಘನತೆ ಹೆಚ್ಚಿಸಲು ಶೌಚಾಲಯ ನಿರ್ಮಾಣ, ಅಡುಗೆ ಅನಿಲ ಉಚಿತ ಸಂಪರ್ಕ, ಪರಿಶಿಷ್ಟ ಸಮುದಾಯ, ಹಿಂದುಳಿದ ವರ್ಗ ಮತ್ತು ಯುವಜನರಿಗಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ ಎಂದು ಹೇಳಿದರು. ದೇಶದಲ್ಲಿ ಇರುವುದು ರೈತರು, ಮಹಿಳೆಯರು, ಯುವಜನರು ಮತ್ತು ಬಡವರು ಎಂಬ ನಾಲ್ಕು ಜಾತಿಗಳು ಮಾತ್ರ ಎಂಬುದು ಪ್ರಧಾನಿ ಅವರ ಪ್ರತಿಪಾದನೆಯಾಗಿದ್ದು, ದೇಶದ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತಿದ್ದಾರೆ ಎಂದರು.


## ಹನ್ನೆರಡನೇ ವರ್ಷದ ಸವಿನೆನಪು



**ಶ್ರೀ ಹನುಮಗೌಡ ಜಿ.ಆರ್**

**ಗುಡ್ಡದ ಬೇವಿನಹಳ್ಳಿ, ನಂದೀಶ್ ಫರ್ಟಿಲೈಜರ್ಸ್ ಮಾಲೀಕರು.**

*ನೀವು ನಮ್ಮನ್ನಗಲಿ ಇಂದಿಗೆ 12 ವರ್ಷಗಳಾದವು.*

*ಸದಾ ನಿನ್ನ ನೆನಪು ನಮ್ಮ ಮನದಲ್ಲಿ ಅಚ್ಚಳಿಯದೇ ನೆಲೆಸಿದೆ.*

*ಸದಾ ನಿನ್ನನ್ನು ನೆನಪಿಸಿಕೊಳ್ಳುತ್ತಿರುವ ನಿನ್ನ*

✦ ತಂದೆ : ಜಿ.ರುದ್ರೇಗೌಡ ✦ ತಾಯಿ: ಗೌರಮ್ಮ
✦ ಪತ್ನಿ : ಪವಿತ್ರ ✦ ಮಗ : ಸಮರ್ಥ
✦ ಅಕ್ಕ : ಸುಧಾ ಪರಮೇಶ್ವರಪ್ಪ ✦ ತಂಗಿ : ಮೇನಕಾ ಬಸವರಾಜ್

## ವೈಕುಂಠ ಸಮಾರಾಧನೆ



ನಮ್ಮ ಪೂಜ್ಯ ತಂದೆಯವರಾದ

**ಬಿ.ಡಿ. ನೇಮಾ ನಾಯ್ಕ್**

ನಿವೃತ್ತ ಸಹಾಯಕ ಕೃಷಿ ಅಧಿಕಾರಿ

(ವಯಸ್ಸು 74)

ಇವರು, ದಿನಾಂಕ: 06.09.2024 ಶುಕ್ರವಾರ ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಆ ಪರಮಾತ್ಮನು ಚಿರಶಾಂತಿ ನೀಡಲೆಂದು

**'ವೈಕುಂಠ ಸಮಾರಾಧನೆ'ಯನ್ನು**

**ಬ್ಯಾಟಗಾರನಹಳ್ಳಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ನಮ್ಮ ನಿವಾಸದಲ್ಲಿ ದಿನಾಂಕ: 19.09.2024 ಗುರುವಾರದಂದು ಬೆಳಿಗ್ಗೆ 9:00 ರಿಂದ 10:00 ರವರೆಗೆ ನೆರವೇರಿಸಲಾಗುವುದು.**

ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ, ಅಗಲಿದ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ವಿನಂತಿಸುತೇವೆ.

**ಇಂತಿ ದುಃಖತಪ್ತ ಕುಟುಂಬ ಸದಸ್ಯರು ಮತ್ತು ಬಂಧು ಬಳಗ, ಬ್ಯಾಟಗಾರನಹಳ್ಳಿ.**

॥ ಶ್ರೀ ಬೀರಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ಹುಲಿಗೆಮ್ಮದೇವಿ ಕೃಪೆ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



**ಶ್ರೀಮತಿ ಹನುಮಮ್ಮ ಮತ್ತು ಮಕ್ಕಳು**

ಜಿಗಳಿ ಗ್ರಾಮ, ಹರಿಹರ ತಾಲ್ಲೂಕು

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 10.09.2024ನೇ ಮಂಗಳವಾರ ಬೆಳಿಗ್ಗೆ 05.30ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಮಾಸಡಿ ಕರಿಯಪ್ಪ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಸಮಾರಾಧನೆ'ಯನ್ನು**

ದಿನಾಂಕ 18.09.2024ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಜಿಗಳಿ ಗ್ರಾಮದಲ್ಲಿರುವ "ಮೃತರ ಸ್ವಗೃಹದಲ್ಲಿ" ನೆರವೇರಿಸಲಾಗುವುದು ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

**ಶ್ರೀಮತಿ ಹನುಮಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮಾಸಡಿ ವಂಶಸ್ಥರು, ಜಿಗಳಿ ಹಾಗೂ ಬಂಧು-ಮಿತ್ರರು.**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ನಗರದಲ್ಲಿ ಇಂದು ಇಂಡಕ್ಷನ್ ಕಾರ್ಯಕ್ರಮ

ಜೈನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಹೊಸದಾಗಿ ಪ್ರವೇಶ ಪಡೆದ ಮೊದಲ ವರ್ಷದ ಬಿ.ಇ ವಿದ್ಯಾರ್ಥಿಗಳಿಗೆ ಇಂದಿನಿಂದ 10 ದಿನಗಳ ಇಂಡಕ್ಷನ್ ಕಾರ್ಯಕ್ರಮ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಕಿಯೋನಿಕ್ಸ್ ನಿರ್ದೇಶಕ ಕೆ.ಎನ್. ಪ್ರವೀಣ್ ಆಗಮಿಸುವರು. ಬೆಳಗಾವಿ ವಿಟಿಯು ರಿಜಿಸ್ಟ್ರಾರ್ (ಮೌಲ್ಯಮಾಪನ) ಡಾ. ಟಿ.ಎನ್. ಶ್ರೀನಿವಾಸ್ ಕಾರ್ಯಕ್ರಮ ಉದ್ಘಾಟಿಸುವರು.



# ಹಳೆ ಊರಲ್ಲಿನ ಹಳೆ ಕಾಲದ ಗಣೇಶೋತ್ಸವ ಸ್ವಾರಸ್ಯಗಳು

**ಚತುರ್ಥಿಯಂದು ಸ್ಥಾಪಿಸಿದ ಗಣೇಶನನ್ನು ನೋಡಲು ಜನ ಹೋಗುವುದು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಭರದಿಂದ ನಡೆಯುತ್ತಿವೆ.**

## 'ಸಾಕಾಗೇತಿ ಸುಮ್ಕಿರೋ ಗಣಪ್ಪ'

> **ನಮ್ಮ ಬಾಲ್ಯದಲ್ಲಿ ಹಳೆ ದಾವಣಗೆರೆ ಭಾಗದಲ್ಲಿನ ಗಣೇಶೋತ್ಸವದ ಸ್ವಾರಸ್ಯ...**
> - ಹೆಚ್.ಬಿ.ಮಂಜುನಾಥ,
> ಹಿರಿಯ ಪತ್ರಕರ್ತ

ದಾವಣಗೆರೆ ಹಳೇ ನಗರದ ಚೌಕಿಪೇಟೆ ಒಂದು ರಾಜಬೀದಿ. ಯಾವುದೇ ಮೆರವಣಿಗೆಗಳಿದ್ದರೂ ಅಲ್ಲಿಗೆ ಬರಲೇಬೇಕು. ದಶಕಗಳ ಹಿಂದೆ ಸಾರ್ವಜನಿಕ ಗಣೇಶ ವಿಸರ್ಜನೆಯ ಮೆರವಣಿಗೆಗಳಲ್ಲಿ ರಾಕ್ಷಸರು ಹಾಗೂ ಗಣೇಶನ ಸ್ತಬ್ಧ ಚಿತ್ರಗಳು ಅಂದರೆ ಟ್ಯಾಬ್ಲೋಗಳು, ಟ್ರ್ಯಾಕ್ಟರುಗಳ ಮೇಲೆ ಇರುತ್ತಿದ್ದವು. ಹೆಸರಿಗೆ ಸ್ತಬ್ಧ ಚಿತ್ರ. ಆದರೆ, ಅಭಿನಯವನ್ನೂ ಮಾಡುತ್ತಿದ್ದರು.



ಮುಖಕ್ಕೆಲ್ಲಾ ಕಪ್ಪು ಬಣ್ಣ ಬಳಿದುಕೊಂಡು ಕೋರೆ ದಾಡಿಗಳಿಂದ ಅಕರಾಳ ವಿಕರಾಳವಾದ ಸ್ಥೂಲ ಮೈಕಟ್ಟಿನ ರಾಕ್ಷಸ ವೇಷಧಾರಿಗಳು ಖಡ್ಗವನ್ನು ಝಳಪಿಸುತ್ತಾ ಗಧೆಯನ್ನು ತಿರುಗಿಸಿತ್ತಾ ಜೋರಾಗಿ ಘರ್ಜಿಸುತ್ತಾ ಗಣಪತಿ ಪಾತ್ರದ ಮೇಲೆ ಎರಗುವಂತೆ ಹೋಗುವುದು ಆಗ ಗಣಪತಿ ವೇಷಧಾರಿ ಅವರ ಕಡೆ ತ್ರಿಶೂಲವನ್ನು ತೋರಿಸುತ್ತಲೇ ರಾಕ್ಷಸ ವೇಷದವರು ಬಿದ್ದಂತೆ ನಟಿಸಿ ಪುನಹ ಎದ್ದು ಗಣಪತಿಯ ಮೇಲೆ ಎರಗುವುದು, ಮೆರವಣಿಗೆ ಉದ್ದಕ್ಕೂ ನೋಡಲು ರುದ್ರರಮಣೀಯವಾಗಿರುತ್ತಿತ್ತು. ಮಧ್ಯಾಹ್ನ ಹೊರಟ ಮೆರವಣಿಗೆ ಕಿಲೋಮೀಟರ್ ಗಟ್ಟಲೇ ಸಾಗಿ ಸಂಜೆ ಚೌಕಿಪೇಟೆಗೆ ಬರುವಾಗ ರಾಕ್ಷಸ ಪಾತ್ರಧಾರಿಗಳು ಸುಸ್ತಾಗಿ ಹೋಗಿರುತ್ತಿದ್ದರು.

ಗಣಪತಿ ವೇಷಧಾರಿಗೆ ಸುಸ್ತು ಇಲ್ಲ, ಕಾರಣ ಕೂತಲ್ಲಿಂದಲೇ ತ್ರಿಶೂಲ ಎತ್ತಿ ತೋರಿಸುವುದು ಕೆಳಗಿಳಿಸುವುದು ಅಷ್ಟೇ ಕೆಲಸ. ಕೊನೆ ಕೊನೆಗೆ ಪರಿಸ್ಥಿತಿ ಹೇಗಾಗಿರುತ್ತಿದ್ದೆಂದರೆ ರಾಕ್ಷಸರು ಮೇಲೇರಿ ಬಂದ ಮೇಲೆ ಗಣಪತಿ ತ್ರಿಶೂಲ ತೋರಿಸಬೇಕು. ಆದರೆ, ಸುಸ್ತಾಗಿ ಕುಳಿತ ರಾಕ್ಷಸರ ಕಡೆಗೆ ಗಣಪತಿಯೇ ತ್ರಿಶೂಲ ತೋರಿಸುವುದು ಆಮೇಲೆ ರಾಕ್ಷಸರು ಏಳಲಾರದೆ, ಎದ್ದು ಖಡ್ಗ ಅಲುಗಾಡಿಸಿ ಕೂರುತ್ತಿದ್ದರು.

ಒಮ್ಮೆಯಂತೂ ಪರಿಸ್ಥಿತಿ ಹೇಗಾಗಿತ್ತೆಂದರೆ ಚೌಕಿಪೇಟೆಯ ಪಶ್ಚಿಮದಿಂದ ಗಣಪತಿ ವಿಸರ್ಜನೆಯ ಹೊಂಡಕ್ಕೆ ಒಂದು ಫರ್ಲಾಂಗ್ ದೂರ ಮಾತ್ರ ಉಳಿದಿತ್ತು. ಗಣಪತಿ ಪಾತ್ರಧಾರಿ ತ್ರಿಶೂಲವನ್ನು ಪದೇ ಪದೇ ರಾಕ್ಷಸರತ್ತ ತಿವಿಯುವಂತೆ ಮಾಡಿದರೂ ಸುಸ್ತಾಗಿ ಕುಳಿತಿದ್ದ ರಾಕ್ಷಸ ವೇಷಧಾರಿಗಳು ಏಳುವ ಬದಲು ಗಣಪತಿಗೆ ತುಸು ಜೋರಾಗೇ ಹೇಳಿದರು. 'ಸುಸ್ತಾಗೇತಿ ಸಾಕೋ ಮಾರಾಯ ಗಣಪ್ಪ, ತ್ರಿಶೂಲ ತಿವ್ದ್ ಎಬ್ರುಸ್ ಬ್ಯಾಡ, ಇನ್ನು ಹೊಂಡದ್ ಮಟಾ ಯಾಕ್ಷನ್ ಇಲ್ಲ, ಬರೀ ಸ್ಟಿಲ್ಲು, ತಿಳೀತಾ...'

# ಪ್ರಜಾಪ್ರಭುತ್ವದ ಆಶಯ ಈಡೇರಿಸಲು ಬದ್ಧರಾಗಬೇಕು



**ಟಿ. ಗೋಪಗೊಂಡನಹಳ್ಳಿಯಲ್ಲಿನ ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಡಿ. ಜಿ. ಶಾಂತನಗೌಡ ಕರೆ**

ನ್ಯಾಮತಿ, ಸೆ. 17 - ವಿಶ್ವ ಪ್ರಜಾಪ್ರಭುತ್ವ ದಿನದ ಅಂಗವಾಗಿ ರಾಜ್ಯ ಸರ್ಕಾರ 2500 ಕಿ.ಮೀ. ವ್ಯಾಪ್ತಿಯಲ್ಲಿ ಮಾನವ ಸರಪಳಿ ನಿರ್ಮಿಸುವ ಮೂಲಕ ಐತಿಹಾಸಿಕ ಮೈಲುಗಲ್ಲು ಸೃಷ್ಟಿಸಿದೆ ಎಂದು ಶಾಸಕ ಡಿ.ಜಿ. ಶಾಂತನಗೌಡ ಬಣ್ಣಿಸಿದರು.

ನ್ಯಾಮತಿ ತಾಲ್ಲೂಕಿನ ಗಡಿ ಭಾಗದ ಟಿ. ಗೋಪಗೊಂಡನಹಳ್ಳಿ ಪಂಚಾಯ್ತಿ ವತಿಯಿಂದ ಮೊನ್ನೆ ಹಮ್ಮಿಕೊಳ್ಳಲಾಗಿದ್ದ ಅಂತರ ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮವನ್ನು ಸಂವಿಧಾನದ ಪೀಠಿಕೆ ಓದುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಸರ್ಕಾರವು ಸದಾ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವ ಕೆಲಸ ಮಾಡುತ್ತಿದೆ ಈ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜನೆ ಶ್ಲಾಘನೀಯ ಎಂದರು.

ವಿಶ್ವದ ಅತೀ ಉದ್ದದ ಮಾನವ ಸರಪಳಿಯನ್ನು ನಿರ್ಮಿಸಿ ನಾಗರಿಕರನ್ನು ಉತ್ತೇಜಿಸಿ ಸಮಾಜದಲ್ಲಿ ಸಮಾನತೆ, ಏಕತೆ, ಭ್ರಾತೃತ್ವವನ್ನು ಬೆಳೆಸುವ ಸದುದ್ದೇಶದಿಂದ ಹಮ್ಮಿಕೊಂಡಿರುವ ಈ ಕಾರ್ಯಕ್ರಮದ ಆಶಯಗಳನ್ನು ಎಲ್ಲರೂ ಈಡೇರಿಸುವ ನಿಟ್ಟಿನಲ್ಲಿ ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.

ಬೃಹತ್ ಮಾನವ ಸರಪಳಿ ನಿರ್ಮಿಸಿ ನಾವೆಲ್ಲಾ ಒಂದೇ ಎಂಬ ಸಂದೇಶ ಸಾರುವ ಈ ಕಾರ್ಯಕ್ರಮವು ಸಮಾಜದಲ್ಲಿ ಅಸ್ಪೃಶ್ಯತೆ ಎಂಬ ಪಿಡುಗನ್ನು ಹೋಗಲಾಡಿಸಿ ಸಮಾಜದಲ್ಲಿ ಶಾಂತಿ, ಸೌಹಾರ್ದತೆಯನ್ನು ಬೆಳೆಸುವ ಮಹತ್ವದ ಕಾರ್ಯಕ್ರಮವಾಗಿದೆ ಎಂದು ಶಾಸಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಹಿರೇಕಲ್ಮಠದ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ನಾವೆಲ್ಲರೂ ನಮ್ಮ ಕರ್ತವ್ಯಗಳನ್ನು ಅಚ್ಚುಕಟ್ಟಾಗಿ ಪಾಲಿಸಬೇಕು, ಸಮಾಜದಲ್ಲಿ ಜಾತ್ಯಾತೀತ, ಮನೋಭಾವನೆ ರೂಢಿಸಿಕೊಳ್ಳಬೇಕೆಂದು ಅವರು ಕರೆ ನೀಡಿದರು.

ತಾ.ಪಂ. ಇಒ ಎಚ್.ವಿ. ರಾಘವೇಂದ್ರ ಮಾತನಾಡಿ, ಪಂಚಾಯ್ತಿ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮವನ್ನು ಅವಿಸ್ಮರಣೀಯ ವಾಗಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯ ವತಿಯಿಂದ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನೂ ಸಹ ಆಯೋಜಿಸಿದ್ದೇವೆ ಎಂದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಎಚ್.ಎಲ್.ಉಮಾ ಮಾತನಾಡಿದರು.

ಉಪವಿಭಾಗಾಧಿಕಾರಿ ವಿ. ಅಭಿಷೇಕ್, ತಹಶೀಲ್ದಾರ್ ಗೋವಿಂದಪ್ಪ, ಹೊನ್ನಾಳಿ ಇಒ ಎಂ.ಆರ್. ಪ್ರಕಾಶ್, ಡಿಡಿಸಿಸಿ ಬ್ಯಾಂಕ್ ನಿರ್ದೇಶಕರುಗಳಾದ ಡಿ.ಜಿ. ವಿಶ್ವನಾಥ್, ಡಿ.ಎಸ್. ಸುರೇಂದ್ರಗೌಡ, ಕಾಂಗ್ರೆಸ್ ಮುಖಂಡ ಎಚ್.ಎ. ಉಮಾಪತಿ, ಪೊಲೀಸ್ ಇನ್ಸ್‌ಪೆಕ್ಟರ್ ರವಿ, ಗ್ರಾ.ಪಂ. ಪಿಡಿಒ ರಶ್ಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಂತೋಷ್, ಸ್ಫೂರ್ತಿ ಸಂಸ್ಥೆಯ ಮುಖ್ಯಸ್ಥ ರೂಪ್ಲಾನಾಯ್ಕ್ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಾರ್ವಜನಿಕರು, ಉಪಸ್ಥಿತರಿದ್ದರು.

# ಚಿಕಾಗೋ ಸಮ್ಮೇಳನದ ಸ್ಮರಣೆ : ಭಾಷಣ ಸ್ಪರ್ಧೆ



ದಾವಣಗೆರೆ, ಸೆ. 17 -ನಗರದ ಶ್ರೀ ರಾಮಕೃಷ್ಣ ಮಿಷನ್ ವತಿಯಿಂದ ಸ್ವಾಮಿ ವಿವೇಕಾನಂದರ ಚಿಕಾಗೋ ಸರ್ವಧರ್ಮ ಸಮ್ಮೇಳನದ 132 ನೇ ಸ್ಮರಣೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಭಾಷಣ ಸ್ಪರ್ಧೆಯಲ್ಲಿ ನಗರದ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಶಾಲೆಯಿಂದ 17 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕು.ರುಚಿತಾ ರೆಡ್ಡಿ ಪ್ರಥಮ, ಕು. ಅದ್ವಿತಿ ದ್ವಿತೀಯ, ಕು. ಯಶ್ಚಿಕ ತೃತೀಯ ಸ್ಥಾನ ಪಡೆದಿದ್ದಾರೆ.

# ಕೋಳಿ, ಕುರಿ ಸಾಕಾಣಿಕೆ ತರಬೇತಿ

ದಾವಣಗೆರೆ, ಸೆ.17 - ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ನಗರದ ಪಶು ಆಸ್ಪತ್ರೆ ಆವರಣದ ಪಶು ಪಾಲನಾ ಮತ್ತು ಪಶು ವೈದ್ಯಕೀಯ ತರ ಬೇತಿ ಕೇಂದ್ರದಲ್ಲಿ ಆಧುನಿಕ ಹೈನು ಗಾರಿಕೆ, ಕೋಳಿ, ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಶಿಬಿರ ಆಯೋಜಿಸಲಾಗಿದೆ.

ಆಧುನಿಕ ಹೈನುಗಾರಿಕೆ ತರ ಬೇತಿಯು ಇದೇ ದಿನಾಂಕ 25 ಮತ್ತು 26ಕ್ಕೆ, ಕೋಳಿ ಸಾಕಾಣಿಕೆ ಇದೇ ದಿನಾಂಕ 17 ಮತ್ತು 18ಕ್ಕೆ, ಕುರಿ ಮೇಕೆ ಸಾಕಾಣಿಕೆ ಇದೇ ದಿನಾಂಕ 20 ಮತ್ತು 21 ರಂದು ನಡೆಯಲಿವೆ. ಮಾಹಿತಿಗಾಗಿ 08192-233787 ಸಂಪರ್ಕಿಸಿ.

# ಈರುಳ್ಳಿ ಬೆಳೆಗೆ ನೇರಳೆ ಎಲೆ ಮಚ್ಚೆ ರೋಗ ಬಾಧೆ

**ನಿಬಗೂರು ಗ್ರಾಮದ ಕ್ಷೇತ್ರೋತ್ಸವದಲ್ಲಿ ತೋಟಗಾರಿಕೆ ವಿಜ್ಞಾನಿ ಎಂ.ಜಿ ಬಸವನಗೌಡ**



ಜಗಳೂರು ಸೆ.17 - ಈ ವರ್ಷ ಅತೀ ಹೆಚ್ಚು ಮಳೆಯಿಂದಾಗಿ ಈರುಳ್ಳಿಯಲ್ಲಿ ನೇರಳೆ ಎಲೆ ಮಚ್ಚೆ ರೋಗದ ಬಾಧೆ ತೀವ್ರವಾಗಿದ್ದು, ಗಡ್ಡೆಗಳ ಬೆಳವಣಿಗೆಯೂ ಸಹ ಕುಂಠಿತವಾಗಿದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ತಿಳಿಸಿದರು.

ಜಗಳೂರು ತಾಲ್ಲೂಕು ನಿಬಗೂರು ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಈರುಳ್ಳಿಯಲ್ಲಿ ಭೀಮಾ ಡಾರ್ಕ್ ರೆಡ್ ತಳಿಯ ಕ್ಷೇತ್ರೋತ್ಸವ'ದಲ್ಲಿ ಅವರು ಮಾತನಾಡಿದರು.

ಆದರೆ ಪ್ರಾತ್ಯಕ್ಷಿಕೆ ತಾಕುಗಳಲ್ಲಿ ಹಮ್ಮಿಕೊಂಡ ವೈಜ್ಞಾನಿಕ ನಿರ್ವಹಣಾ ಕ್ರಮಗಳಾದ ಟ್ರೈಕೋಡರ್ಮಾ ಬೀಜೋಪಚಾರ, ಲಘು ಪೋಷಕಾಂಶಗಳ ಬಳಕೆ ಹಾಗೂ ಅಗತ್ಯ ಸಸ್ಯ ಸಂರಕ್ಷಣಾ ಕ್ರಮಗಳಿಂದ ಕೆಲವೆಡೆ ಈರುಳ್ಳಿ ಬೆಳೆ ಉತ್ತಮವಾಗಿ ಬಂದಿದೆ ಎಂದು ಹೇಳಿದರು. ರೈತರು ತಾವು ಬೆಳೆದ ತರಕಾರಿಗಳನ್ನು ಗುಣಮಟ್ಟದ ಆಧಾರದಲ್ಲಿ ವರ್ಗೀಕರಿಸಿ ಮಾರಾಟ ಮಾಡುವುದರಿಂದ ಹೆಚ್ಚಿನ ಬೆಲೆಯನ್ನು ನಿರೀಕ್ಷಿಸಬಹುದೆಂದು ಅವರು ಸಲಹೆ ನೀಡಿದರು.

ಕೇಂದ್ರದ ಸಸ್ಯ ಸಂರಕ್ಷಣಾ ವಿಜ್ಞಾನಿ ಡಾ. ಟಿ.ಜಿ ಅವಿನಾಶ್ ಮಾತನಾಡಿ, ರೈತರು ಈಗ ಬೆಳೆದಿರುವ ಈರುಳ್ಳಿ ಕೂಳೆಯಲ್ಲಿ ಮತ್ತೆ ಈರುಳ್ಳಿ ಬೆಳೆಯದೇ ಯಾವುದಾದರೊಂದು ಬೇರೆ ದ್ವಿದಳ ಧಾನ್ಯದ ಬೆಳೆಯನ್ನು ಬೆಳೆಯುವುದರಿಂದ ಮಣ್ಣು ಫಲವತ್ತತೆ ಜೊತೆಗೆ ರೋಗ ರುಜನೆಗಳೂ ಸಹ ಕಡಿಮೆಯಾಗುತ್ತವೆ ಎಂದು ತಿಳಿಸಿದರು.

ಗ್ರಾಮದ ಪ್ರಾತ್ಯಕ್ಷಿಕ ರೈತರಾದ ನಾಗರಾಜ್ , ತಮ್ಮ ಬೆಳೆಯ ಅನುಭವಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಬಿದರಕೆರೆ ರೈತ ಉತ್ಪಾದಕ ಕಂಪನಿಯ ನಿರ್ದೇಶಕ ರೇವಣಸಿದ್ದಪ್ಪ, ರೈತರಾದ ಗುರುಸಿದ್ದಪ್ಪನಗೌಡ, ವೀರೇಶ್, ಪ್ರವೀಣ, ಕಲ್ಲೇಶ್, ಗುರುಸಿದ್ದಪ್ಪ ಮತ್ತು ಶರಣಪ್ಪ ಇತರರು ಹಾಜರಿದ್ದರು.

# ಮಲೇಬೆನ್ನೂರಿನಲ್ಲಿ ರಂಗೋಲಿ ಸ್ಪರ್ಧೆ : ಮುಸ್ಲಿಂ ಮಹಿಳೆಗೆ ಪ್ರಥಮ ಬಹುಮಾನ





ಮಲೇಬೆನ್ನೂರು, ಸೆ. 17 - ಇಲ್ಲಿನ ನೀರಾವರಿ ಇಲಾಖೆಯ ಕಚೇರಿ ಮೈದಾನದಲ್ಲಿ ಪ್ರತಿಷ್ಠಾಪಿಸಿರುವ 3ನೇ ವರ್ಷದ ಹಿಂದೂ ಮಹಾಗಣಪತಿ ಮಹೋತ್ಸವದ ಅಂಗವಾಗಿ ಪಿಡಬ್ಲ್ಯೂಡಿ ಕ್ರಿಕೆಟರ್ಸ್ ವತಿಯಿಂದ ಹಮ್ಮಿಕೊಂಡಿದ್ದ ರಂಗೋಲಿ ಸ್ಪರ್ಧೆಯಲ್ಲಿ ಪಟ್ಟಣದ ಮುಸ್ಲಿಂ ಮಹಿಳೆ ನಗೀನಾ ಬಾನು ಅವರು ಪ್ರಥಮ ಸ್ಥಾನಗಳಿಸುವ ಮೂಲಕ ಗಮನ ಸೆಳೆದಿದ್ದಾರೆ.

ಹಿಂದೂಗಳೇ ನಡೆಸಿದ ರಂಗೋಲಿ ಸ್ಪರ್ಧೆಯಲ್ಲಿ ಮುಸ್ಲಿಂ ಮಹಿಳೆಯೊಬ್ಬರು ಭಾಗವಹಿಸಿ ಪ್ರಥಮ ಸ್ಥಾನದಲ್ಲಿ ವಿಜೇತರಾಗುವ ಮೂಲಕ ಕೋಮು ಸೌಹಾರ್ದತೆಗೆ ಸಾಕ್ಷಿಯಾಗುವುದುರ ಜೊತೆಗೆ ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾದರು.

ರಂಗೋಲಿ ಸ್ಪರ್ಧೆಯಲ್ಲಿ ನಗೀನಾ ಬಾನು ಇವರು ಬಿಡಿಸಿದ್ದ 'ಹೆಣ್ಣು ಮಕ್ಕಳ ರಕ್ಷಿಸಿ ಮತ್ತು ಅವಳಿಗೆ ನ್ಯಾಯ ಕೊಡಿ' ಎಂಬ ಸಂದೇಶ ಸಾರುವ ರಂಗೋಲಿ ಚಿತ್ರ ಜನರ ಗಮನ ಸೆಳೆದು, ಪ್ರಥಮ ಬಹುಮಾನ ಗಳಿಸಿತು.

ರಂಗೋಲಿ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪೂಜಾ ಶೇಖರಪ್ಪ, ತೃತೀಯ ಬಹುಮಾನ ರಾಧಾ ಬಿ.ಎಸ್., 4ನೇ ಬಹುಮಾನ ಸಹನಾ ನಾಗರಾಜ್, 5ನೇ ಬಹುಮಾನವನ್ನು ಜಯಮ್ಮ ಗಳಿಸಿದರು.

ವಿಜೇತರಿಗೆ ಹಿಂದೂ ಮಹಾಗಣಪತಿ ಸಮಿತಿ ಅಧ್ಯಕ್ಷ ಅಶೋಕ್ ಯರೆಚಿಕ್ಕನಹಳ್ಳಿ, ಖಜಾಂಚಿ ಪಿ ಆರ್ ರಾಜು, ಪಿಡಬ್ಲ್ಯೂಡಿ ಕ್ರಿಕೆಟರ್ಸ್ ಅಧ್ಯಕ್ಷ ಎ ಕೆ ಆಂಜನೇಯ ಮತ್ತಿತರರು ಬಹುಮಾನ ವಿತರಿಸಿದರು.

40ಕ್ಕೂ ಹೆಚ್ಚು ಮಹಿಳೆಯರು ರಂಗೋಲಿ ಸ್ಪರ್ಧೆಯಲ್ಲಿ ಪಾಲ್ಗೊಂಡು ಅತ್ಯಾಕರ್ಷಕ ರಂಗೋಲಿ ಚಿತ್ರಗಳನ್ನು ಬಿಡಿಸಿದ್ದು, ಜನರ ಗಮನ ಸೆಳೆದವು.

# ಭಕ್ತಿ ಭಾವದಿಂದ ಆಚರಿಸುವ ಹಬ್ಬವೇ ಕೃಷ್ಣ ಜನ್ಮಾಷ್ಟಮಿ



ದಾವಣಗೆರೆ, ಸೆ.17 - ತಾಲ್ಲೂಕಿನ ಗೋಣಿವಾಡದ ಶ್ರೀ ಸೋಮೇಶ್ವರ ವಿದ್ಯಾಲಯ ಹಾಗೂ ಸರ್.ಎಂ.ವಿ. ಎಲೈಟ್ ಒಲಂಪಿಯಾಡ್ ಶಾಲೆಯಲ್ಲಿ ಈಚೆಗೆ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಈ ವೇಳೆ ಶಾಲೆಯ ಪ್ರಾಚಾರ್ಯರಾದ ವೀಣಾ ಮಾತನಾಡಿ, ಭಾರತೀಯ ಸಾಂಸ್ಕೃತಿಕ ಪರಂಪರೆಯು ಅರ್ಥಪೂರ್ಣ ಸಂಪ್ರದಾಯಗಳನ್ನು ಒಳಗೊಂಡಿದೆ. ಭಾರತೀಯರು ಅತ್ಯಂತ ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸುವ ಹಬ್ಬವೇ ಶ್ರೀ ಕೃಷ್ಣ ಜನ್ಮಾಷ್ಟಮಿ ಎಂದು ಹೇಳಿದರು.

ಶಾಲೆಯ ಮಕ್ಕಳು ಕೃಷ್ಣ-ರಾಧೆಯರ ವೇಷ ಧರಿಸಿ ನಂದಗೋಕುಲ ಸೃಷ್ಟಿಸಿದ್ದಾರೆ ಎಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಸರ್‌ಎಂವಿ ಕಾಲೇಜಿನ ನಿರ್ದೇಶಕ ಪ್ರದೀಪ್ ಮಾತನಾಡಿ, ಗ್ರಾಮೀಣ ಭಾಗದ ಜನರಲ್ಲಿ ಹಬ್ಬ ಹಾಗೂ ಸಂಪ್ರದಾಯದ ಆಚರಣೆಗಳ ವೈಶಿಷ್ಟ್ಯತೆ ಇಂದಿಗೂ ಜೀವಂತವಾಗಿವೆ. ಗ್ರಾಮಾಂತರ ಪ್ರದೇಶದ ಈ ಶಾಲೆಯ ಮಕ್ಕಳಿಗೆ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ನೀಡುತ್ತಿರುವುದು ಶ್ಲಾಘನೀಯ ಎಂದರು.



# ಬುದ್ಧನೇ ಬಹುದೊಡ್ಡ ದುಃಖ ಪರಿಹಾರ ವಿಜ್ಞಾನಿ

**ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ ಶಿವನಕೆರೆ ಬಸವಲಿಂಗಪ್ಪ**

ದಾವಣಗೆರೆ, ಸೆ.17 - ಬುದ್ಧ ಬಹುದೊಡ್ಡ ದುಃಖ ಪರಿಹಾರ ವಿಜ್ಞಾನಿ. ಈತ ಸಾರ್ವಕಾಲಿಕ ಭವರೋಗಗಳ ವೈದ್ಯ. ಈತನ ಮಾತುಗಳು ಅಂದು, ಇಂದು, ಎಂದೂ ಪರಮಸತ್ಯವಾಗಿವೆ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಅಭಿಪ್ರಾಯಿಸಿದರು.

ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ 'ಮಹಾರೋಗಗಳು ಮತ್ತು ದಿವ್ಯ ಔಷಧಿಗಳು' ಎಂಬ ವಿಷಯ ಕುರಿತು ಅವರು ಮಾತನಾಡಿದರು.

ಬುದ್ಧನದು ಮಧ್ಯಮ ಮಾರ್ಗ. ಆತ ಎಲ್ಲಾ 'ಅತಿ'ಗಳನ್ನು ಅಲ್ಲಗಳೆದ. ಆತ ಬೋಧಿಸಿದ್ದು ಅಷ್ಟಾಂಗ ಮಾರ್ಗಗಳಾದ ಸರಿಯಾದ ದೃಷ್ಟಿ, ಸರಿಯಾದ ಸಂಕಲ್ಪ, ಸರಿಯಾದ ಮಾತು, ಸರಿಯಾದ ಕಾರ್ಯ, ಸರಿಯಾದ ಉದ್ದೇಶ, ಸರಿಯಾದ ಪ್ರಯತ್ನ, ಸರಿಯಾದ ಜಾಗ್ರತೆ, ಸರಿಯಾದ ಏಕಾಗ್ರತೆ. ಆದರೆ ನಮ್ಮನ್ನು ಸದಾ ಕಾಡುವ ಮಹಾರೋಗಗಳಾದ ಅಹಂಕಾರ, ಭ್ರಮೆ, ದುರಾಸೆ, ದ್ವೇಷ, ಹೊಟ್ಟೆಕಿಚ್ಚಿನಂತಹ ರೋಗಗಳಿಗೆ ಯಾವ ವೈದ್ಯರು ಪರಿಹಾರ ನೀಡುವುದಿಲ್ಲ. ಸತ್ಯ, ಸಮಚಿತ್ತತೆ, ಪ್ರೀತಿ, ಏಕತೆ, ಎಚ್ಚರ ಮತ್ತು ವಿವೇಕಗಳಿಂದ ನಾವೇ ಸ್ವತಃ ವೈದ್ಯರಾಗಿ, ನಮ್ಮ ರೋಗಗಳನ್ನು ನಿವಾರಿಸಿಕೊಳ್ಳಬೇಕು ಎಂದು ಹೇಳಿದರು.

ಪ್ರಕೃತಿ ನಮಗೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಶುದ್ಧ ನೀರು, ಗಾಳಿ, ಆಹಾರ ಸೇರಿದಂತೆ ಇನ್ನು ಅನೇಕ ಅಗತ್ಯ ವಸ್ತುಗಳನ್ನು ನೀಡುತ್ತಿದೆ. ಪರಿಸರವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಈ ನಿಟ್ಟಿನಲ್ಲಿ ದಾವಣಗೆರೆಯ ಪ್ರತಿಯೊಬ್ಬರೂ ಸ್ವಇಚ್ಛೆಯಿಂದ ಗಿಡ, ಮರಗಳನ್ನು ಬೆಳೆಸಿ, ಪರಿಸರ ಸಂರಕ್ಷಿಸಿ ಹಚ್ಚ ಹಸಿರಾಗಿಸೋಣ. 40 ವರ್ಷಗಳ ಹಿಂದೆ ಆ ಕೆಲಸ ಮಾಡಿರುವ ಪಂಪಾಪತಿ ಅವರನ್ನು ಕೃತಜ್ಞತೆಯಿಂದ ಸ್ಮರಿಸಿ ಅವರು ಅಂದು ಗಿಡಮರ ಬೆಳೆಸಿದ ಸತ್ಕಾರ್ಯವನ್ನು ನಾವೆಲ್ಲರೂ ಇಂದು ಕೈಗೆತ್ತಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಡ್ರಿಂಕ್ಸ್, ಡ್ರಗ್ಸ್, ಟೊಬ್ಯಾಕೊ ಎಂಬ ಮಹಾಮಾರಿ ಯುವ ಜೀವಗಳ ಹರಣ ಮಾಡುವುದಲ್ಲದೇ ಸದ್ಯ ಅವರಲ್ಲಿರುವ ಕಿಂಚಿತ್ತೂ ನೈತಿಕ ಪ್ರಜ್ಞೆ, ಭಯ, ತಪ್ಪಿತಸ್ಥ ಮನೋಭಾವನೆಗಳೆಂಬ 'ವಿವೇಕ' ಕಿತ್ತೆಸೆಯುತ್ತಿದೆ. ಇದರ ಬಗ್ಗೆ ಯುವ ಜನತೆ ಮತ್ತು ಇವರ ತಂದೆ ತಾಯಿಗಳು ಎಚ್ಚೆತ್ತುಕೊಳ್ಳಬೇಕು. ಸಮಾಜ ದುಶ್ಚಟಗಳ ಹಾವಳಿಯಿಂದ ನಿರ್ನಾಮವಾಗುವುದನ್ನು ತಡೆದು, ಆನಂದ, ಆರೋಗ್ಯ, ಆತ್ಮವಿಶ್ವಾಸದ ಸುಂದರ, ಭವ್ಯ ಸಮಾಜವಾಗಿ ನಿರ್ಮಾಣ ಮಾಡುವುದು ನಮ್ಮೆಲ್ಲರ, ಪ್ರಮುಖವಾಗಿ ಸರ್ಕಾರದ ಕರ್ತವ್ಯವಾಗಿದೆ ಎಂದು ಹೇಳಿದರು.

ಬಾಪೂಜಿ ಮಕ್ಕಳ ಆಸ್ಪತ್ರೆ ನಿರ್ದೇಶಕ ಡಾ.ಜಿ. ಗುರುಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿ, ಯುವಜನತೆ ಗುಟ್ಕಾ, ಧೂಮಪಾನ ಮತ್ತು ಮದ್ಯಪಾನ ಚಟಕ್ಕೆ ಬಿದ್ದು ಹಣ, ಆರೋಗ್ಯ ಮತ್ತು ಚಾರಿತ್ರ್ಯವನ್ನು ಹಾಳುಮಾಡಿಕೊಂಡು ಸಾವಿನ ಕಡೆ ಸಾಗುತ್ತಿರುವುದು ನೋವಿನ ಸಂಗತಿಯಾಗಿದೆ ಇದನ್ನು ತಡೆಯುವ ಪ್ರಯತ್ನ ಆಗಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಕೌಜಲಗಿ, ಡಾ.ಸುರೇಶ್ ಬಾಬು, ಡಾ.ಮೃತ್ಯುಂಜಯ ಸೇರಿದಂತೆ ಇತರರು ಭಾಗವಹಿಸಿದ್ದರು.

# ಡಿಕೆಶಿ ಪ್ರತಿಕ್ರಿಯೆ ಕೇಳಿದ ಸುಪ್ರೀಂ ಕೋರ್ಟ್

**ಸಿಬಿಐ ಪ್ರಕರಣ**

ನವದೆಹಲಿ, ಸೆ. 17 - ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಲು ನೀಡಲಾಗಿದ್ದ ಅನುಮತಿ ವಾಪಸ್ ಪಡೆದಿರುವ ಬಗ್ಗೆ ಸುಪ್ರೀಂ ಕೋರ್ಟ್ ಪ್ರತಿಕ್ರಿಯೆ ಕೇಳಿದೆ.

ಉಪಮುಖ್ಯಮಂತ್ರಿ ಶಿವಕು ಮಾರ್ ಹಾಗೂ ರಾಜ್ಯ ಸರ್ಕಾರಗಳು ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ಉಜ್ವಲ್ ಭುಯಾನ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ಕರ್ನಾಟಕ ಸರ್ಕಾರ ಆಗಸ್ಟ್ 29ರಂದು ಪ್ರಕರಣ ದಾಖಲಿಸಲು ನೀಡಲಾಗಿದ್ದ ಅನುಮತಿಯನ್ನು ವಾಪಸ್ ಪಡೆದಿತ್ತು. ಇದನ್ನು ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ವಿಚಾರಣೆಯ ವೇಳೆ ಶಿವಕುಮಾರ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಮಾತನಾಡಿ, ಹೈಕೋರ್ಟ್ ಆದೇಶದ ಬಗ್ಗೆ ಸಿಬಿಐ ಆಕ್ಷೇಪ ದಾಖಲಿಸ ಬೇಕಿತ್ತು. ಆದರೆ ಅವರ ಬದಲಾಗಿ ಖಾಸಗಿ ವ್ಯಕ್ತಿಯೊಬ್ಬರು ಅರ್ಜಿ ದಾಖಲಿಸಿದ್ದಾರೆ ಎಂದು ಹೇಳಿದರು.

ಯತ್ನಾಳ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ಸಿದ್ಧಾರ್ಥ ದಾವೆ ವಾದ ಮಂಡಿಸಿ, ಈ ಪ್ರಕರಣದಲ್ಲಿ ಯತ್ನಾಳ್ ಪಾತ್ರದ ಬಗ್ಗೆ ಹೈಕೋರ್ಟ್ ತೀರ್ಪಿನಲ್ಲಿ ಯಾವುದೇ ಅಂಶವಿಲ್ಲ ಎಂದು ಹೇಳಿದರು.

# ನಗರದಲ್ಲಿ ಇಂದು ವಿಜ್ಞಾನ ವಸ್ತು ಪ್ರದರ್ಶನ

ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು (ಅಭಿವೃದ್ಧಿ), ಶಾಲಾ ಶಿಕ್ಷಣ ಇಲಾಖೆಯಿಂದ ಎಜು ಏಷಿಯಾ ಶಾಲೆಯ ಸಭಾಂಗಣ ದಲ್ಲಿ ಇಂದು ಬೆಳಿಗ್ಗೆ 10ಕ್ಕೆ ಜಿಲ್ಲಾ ಮಟ್ಟದ ಪ್ರೌಢ ಶಾಲಾ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆ ಕಾರ್ಯಕ್ರಮ ನಡೆಯಲಿದೆ. ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ. ಕೊಟ್ರೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಡಯಟ್ ಪ್ರಾಚಾರ್ಯ ರಾದ ಎಸ್. ಗೀತಾ ಅಧ್ಯಕ್ಷತೆ ವಹಿಸಲಿದ್ದಾರೆ. ಡಿಎಎಂಎಸ್ ಅಧ್ಯಕ್ಷ ಎಂ. ಎಸ್. ಸಂತೋಷ್ ಕುಮಾರ್, ಡಯಟ್ ಹಿರಿಯ ಉಪನ್ಯಾಸಕರಾದ ಮೊಹಮ್ಮದ್ ಅಯೂಬ್ ಸೊರಬ್, ಎಂ. ಮಂಜುನಾಥ್ ಸ್ವಾಮಿ, ಹೆಚ್.ಆರ್. ವಿಶಾಲಾಕ್ಷಿ, ಎನ್.ಎಸ್. ವಾಣಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

# ಅಂಗನವಾಡಿ : ನಾಳೆ ವಿಧಾನ ಸೌಧ ಚಲೋ ಚಳವಳಿ

ದಾವಣಗೆರೆ, ಸೆ.17 - ನಿವೃತ್ತರಾದ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರೆಲ್ಲರಿಗೂ ಗ್ರಾಚ್ಯುಟಿ ನೀಡ ಬೇಕೆಂಬುದು ಸೇರಿ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಾಡಿದ್ದು ದಿನಾಂಕ 19ರಂದು 'ವಿಧಾನಸೌಧ ಚಲೋ ಚಳವಳಿ' ಆಯೋಜಿಸಿದ್ದೇವೆ ಎಂದು ಎಐಟಿಸಿ ರಾಜ್ಯ ಸಂಚಾಲಕ ಆವರಗೆರೆ ಚಂದ್ರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ಸೇರಿದಂತೆ 5 ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ 'ಅಂಗನವಾಡಿಗಳನ್ನು ಉಳಿಸಿ- ಅಂಗನವಾಡಿಗಳನ್ನು ಬಲಪಡಿಸಿ' ಎಂಬ ಘೋಷ ವಾಕ್ಯದಡಿ ಪ್ರತಿಭಟನೆ ನಡೆಸುತ್ತಿದ್ದೇವೆ ಎಂದು ಹೇಳಿದರು.

ಸಂಯುಕ್ತ ಸಂಘರ್ಷ ಸಮಿತಿಯ ಜಿಲ್ಲಾಧ್ಯಕ್ಷೆ ಎಂ.ಬಿ. ಶಾರದಮ್ಮ ಮಾತನಾಡಿ, ಜಿಲ್ಲಾದ್ಯಂತ ಅಂಗನವಾಡಿ ಕೇಂದ್ರಗಳನ್ನು ಬಂದ್‌ಗೊಳಿಸಿ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ 5 ಪ್ರಮುಖ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವಿಧಾನಸೌಧ ಚಲೋ ಹೊರಡುವುದಾಗಿ ತಿಳಿಸಿದರು.

ರಾಜ್ಯ ಸರ್ಕಾರ 1-4-2023ರಿಂದ ನಿವೃತ್ತಿ ಆದವರಿಗೆ ಗ್ರಾಚುಟಿ ನೀಡುವ ಕುರಿತು ಆದೇಶ ಹೊರಡಿಸುವುದು ಸಮಂಜಸವಲ್ಲ. ಆದ್ದರಿಂದ ಈಗಿನ ಆದೇಶ ತಿದ್ದುಪಡಿ ಮಾಡಿ ಈ ಹಿಂದೆ ನಿವೃತ್ತರಾದ ಎಲ್ಲಾ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಯಾವುದೇ ಷರತ್ತು ಹಾಗೂ ಸೀಲಿಂಗ್‌ಗೆ ಒಳಪಡಿಸದೇ ತಿದ್ದುಪಡಿ ಆದೇಶ ಹೊರಡಿಸಬೇಕು ಎಂದು ತಿಳಿಸಿದರು.

ಗೌರವ ಧನ ಹೆಚ್ಚಿಸಿ ಇಡುಗಂಟು ನೀಡುವ ಯೋಜನೆ ಜಾರಿಗೊಳಿಸುವುದು, ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ-ಯುಕೆಜಿ ಪ್ರಾರಂಭಿಸಲು ತಜ್ಞರ ಸಮಿತಿ ರಚಿಸಿ, ಪೀಠೋಪಕರಣ ಸೇರಿದಂತೆ ಅನುದಾನ ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿದರು.

ಗುಣಮಟ್ಟದ ಪೌಷ್ಠಿಕ ಆಹಾರ ಸರಬರಾಜು, ನೇಮಕಾತಿ ವಯೋಮಿತಿ ಸಡಿಲಿಕೆ ಮಾಡುವುದು ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಚಳವಳಿ ಮಾಡಲಿದ್ದೇವೆ ಎಂದು ಮಾಹಿತಿ ನೀಡಿದರು.

ಪ್ರಧಾನ ಕಾರ್ಯದರ್ಶಿ ಎಸ್.ಎಸ್. ಮಲ್ಲಮ್ಮ, ಖಜಾಂಚಿ ವಿಶಾಲಕ್ಷಿ ಮೃತ್ಯುಂಜಯ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಗೀತಾ, ಜಗಳೂರು ತಾಲ್ಲೂಕು ಅಧ್ಯಕ್ಷ ಸುಶೀಲಮ್ಮ, ಜಿಲ್ಲಾ ಮುಖಂಡರಾದ ಭರಮಕ್ಕ, ರೇಣುಕಾ, ಮಂಜುಳಾ, ಚನ್ನಮ್ಮ ಸುದ್ದಿಗೋಷ್ಠಿಯಲ್ಲಿದ್ದರು.


# ಶಿವಕುಮಾರ ಶ್ರೀ ಶ್ರದ್ಧಾಂಜಲಿ : ಶ್ರೀಗಳ ಮಾದರಿ ಬದುಕಿನಂತಿರಲಿ

ನಾವೆಲ್ಲಾ ಬಲ್ಲಂತೆ ಶಿವಕುಮಾರಶ್ರೀ ನುಡಿದಂತೆ ನಡೆದು, ನಡೆದಂತೆ ನುಡಿದು ಭಕ್ತರಿಗೆ, ಸ್ವಾಮಿಗಳಿಗೆಲ್ಲಾ ಮೇಲ್ಪಂಕ್ತಿ ಹಾಕಿ ಮಾರ್ಗ ದರ್ಶನ ಮಾಡಿದವರು.

ಶ್ರೀ ಗುರುಶಾಂತ ಸ್ವಾಮಿಗಳ ಕಾಲದಲ್ಲಿ ಪ್ರಪ್ರಥಮ ಮಾಧ್ಯಮಿಕ ಶಾಲೆ ಸಿರಿಗೆರೆ ಮಠದಿಂದ ಸಿರಿಗೆರೆಯಲ್ಲಿ ಪ್ರಾರಂಭವಾಗಿ ಅನಕ್ಷರಸ್ಥರಾಗಿದ್ದ ಅಂದಿನ ಕೃಷಿಕ ಭಕ್ತರ ಎದೆಗೆ ಅಕ್ಷರಗಳ ಬೀಜ ಬಿತ್ತಲಾಯಿತು.

ತದ ನಂತರ ಶಿವಕುಮಾರ ಶ್ರೀ ಸ್ವಾತಂತ್ರ ಪೂರ್ವದಲ್ಲೇ ಪ್ರೌಢಶಾಲೆ ಪ್ರಾರಂಭಿಸಿ, ಅಕ್ಷರ ದಾಸೋಹವನ್ನು ನೂರಾರು ಶಾಲಾ-ಕಾಲೇಜುಗಳನ್ನು ತೆರೆದು, ಬೃಹತ್ ಪ್ರಮಾಣದಲ್ಲಿ ಲಕ್ಷಾಂತರ ಜನರನ್ನು ವಿದ್ಯಾವಂತರನ್ನಾಗಿಸಿದರು. ಇದಕ್ಕೆ ಅವರು ಶಕ್ತಿ ಪಡೆದಿದ್ದು ವಿಶ್ವಬಂಧು ಶ್ರೀ ಮರುಳಸಿದ್ಧ, ಶರಣರ ವಚನಗಳು, ಭಕ್ತರೊಡನೆ ಅಪೂರ್ವ, ಅನುಪಮ, ಅನನ್ಯ ಪ್ರೀತಿ-ನೀತಿ, ಸಮತೆ-ಮಮತೆಗಳ ಮಧುರ ತಾಯ್ತನದ ಸಂಬಂದಿಂದ.

ಎಂತಹ ವಿಪರೀತದ ಆರ್ಥಿಕ, ಅಧ್ಯಾತ್ಮಿಕ ಸಾಮಾಜಿಕ, ವೈಯಕ್ತಿಕ ಆಘಾತಕಾರಿ ಸಂದರ್ಭಗಳನ್ನೂ ಕರುಣೆ ಮೈತ್ರಿಯಿಂದ, ಆತ್ಮವಿಮರ್ಶೆಯ ಮೂಲಕ



ನಾಲ್ಕು ಗೋಡೆಗಳ ಮಧ್ಯೆ ಬಗೆಹರಿಸಿದ ಪ್ರಖ್ಯಾತಿ ಅವರದು. ಒಗ್ಗಟ್ಟಿನ, ಒಮ್ಮತದ ಮಂತ್ರ ಜಪಿಸಿದ, ಪಾಲಿಸಿದ ಶ್ರೀಗಳು ಅವರು.

ಈ ತರಳಬಾಳು ಸಂತಾನ ಶ್ರೀ ಜೀವನದ ಹಲವು ಕ್ಷೇತ್ರಗಳಲ್ಲಿ ಬೆಳಕನ್ನು ನೀಡಬೇಕು, ಬೆಂಕಿಯಾಗಬಾರದು ಎಂಬುದು ಸಜ್ಜನ ಭಕ್ತರೆಲ್ಲರ ಆಶಯ, ಪ್ರಾರ್ಥನೆ. ಹಾಗಾದಾಗ ಮಾತ್ರ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಸೊಬಗು, ಸೊಡರು, ಅರ್ಥಪೂರ್ಣತೆ, ಸಾರ್ಥಕತೆ ಬರುತ್ತದೆ. ಈಗ ನಡೆದಿರುವುದೆಲ್ಲ ಬಟಾ ಬಯಲಾಗಿ ಸರ್ವರಿಗೂ ಗೊತ್ತಿರುವ, ಸಜ್ಜನ ಭಕ್ತರಿಗೆ ಬೇಡವಾದ ಕ್ಷುಲ್ಲಕ ಘಟನೆಗಳು. 'ನಾನು , ನನ್ನಿಂದ, ನನಗಾಗಿ' ಬಿಟ್ಟು 'ನಾವು, ನಮ್ಮಿಂದ, ನಮ್ಮೆಲ್ಲರಿಗಾಗಿ, ನಾವೆಲ್ಲಾ ವಿಶ್ವಬಂಧು ಗಳು' ಎಂಬ ಭಾವನೆ ಬಂದರೆ ಎಲ್ಲಾ ಸಮಸ್ಯೆಗಳು ಕೆಲವೇ ದಿನಗಳಲ್ಲಿ ಬಗೆ ಹರಿಯುತ್ತವೆ. ಈಗ ನಡೆಯುತ್ತಿರುವ ಘಟನೆಗಳು ನಿಜಕ್ಕೂ ವಿಷಾದನೀಯ.

ನಾವೆಲ್ಲರೂ ಬಸವಾದಿ ಶರಣರ, ಶಿವಕುಮಾರ ಶ್ರೀಗಳು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಸಹ ಪಯಣ ಮಾಡುವುದೇ ನಮ್ಮ ಮುಂದಿರುವ ಸವಾಲು ಮತ್ತು ಮಾರ್ಗ .

- ಶಿವನಕೆರೆ ಬಸವಲಿಂಗಪ್ಪ.

## ಹರಿಹರದಲ್ಲಿ ಈದ್ ಮಿಲಾದ್ ಬುದ್ಧಿಮಾಂಧ್ಯ ಮಕ್ಕಳಿಗೆ ಊಟದ ವ್ಯವಸ್ಥೆ



ಹರಿಹರ, ಸೆ, 17- ನಗರದ ಇಲಾಹಿ ಸಮಾಜ ಕಲ್ಯಾಣ ವಿದ್ಯಾಸಂಸ್ಥೆ ವತಿಯಿಂದ ಈದ್ ಮಿಲಾದ್ ಅಂಗವಾಗಿ ಅಮರಾವತಿ ಶ್ರೀ ಮರುಳಸಿದ್ದೇಶ್ವರ ಬುದ್ದಿ ಮಾಂಧ್ಯ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿತ್ತು.

ಸಂಸ್ಥೆ ಅಧ್ಯಕ್ಷ ಎಂ.ಆರ್.ರೆಹಮತ್‌ಉಲ್ಲಾ ಬಾಬು, ಸಂಸ್ಥೆಯ ಜಂಟಿ ಕಾರ್ಯದರ್ಶಿ ಜಪ್ರೂಲ್ ಕನವಳ್ಳಿ ಮಾತನಾಡಿದರು.

ಈ ಸಂದರ್ಭದಲ್ಲಿ ಮಾಜಿ ಕಾರ್ಯದರ್ಶಿ ರೆಹಮಾನ್ ರೆಹಮತ್, ಉಪಾಧ್ಯಕ್ಷ ಶಖೀಲ್ ಆಹ್ಮದ್, ಕಾರ್ಯದರ್ಶಿ ಆರ್.ಜಮೀರ್, ಖಜಾಂಚಿ ಮುಸ್ತಾಫ್, ಜಪ್ರೂಲ್ಲಾ ಕೆ, ಮುನಾವರ್ ಆಹ್ಮದ್, ಮುಕ್ತಿಯಾರ್ ಆಹ್ಮದ್, ಇನಾಯತ್ ಉಲ್ಲಾ, ಜಾಹೀರ್ ಆಹ್ಮದ್, ಅಬ್ದುಲ್ ಸತ್ತಾರ್ ಸಾಬ್, ಇಸ್ಮಾಯಿಲ್, ಮಹಬೂಬ್ ಬಾಷಾ, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ, ಶ್ರೀ ಮರುಳ ಸಿದ್ದೇಶ್ವರ ಬುದ್ದಿ ಮಾಂಧ್ಯ ಮಕ್ಕಳ ಶಾಲೆಯ ವ್ಯವಸ್ಥಾಪಕ ಮಹೇಶ್ ಮತ್ತಿಹಳ್ಳಿ ಇತರರು ಹಾಜರಿದ್ದರು.

## ಈದ್ : ಬಡವರಿಗೆ ಬೆಡ್‌ಶೀಟ್ ವಿತರಣೆ



ದಾವಣಗೆರೆ, ಸೆ. 17- ಈದ್ ಮಿಲಾದ್ ಹಬ್ಬದ ಪ್ರಯುಕ್ತ ಜಿಲ್ಲಾ ಮುಸ್ಲಿಂ ಧಾರ್ಮಿಕ ಗುರುಗಳ ಸಂಘದಿಂದ ಬಡವರಿಗೆ ಹಾಗೂ ಕೆಲ ರೋಗಿಗಳಿಗೆ ಬೆಡ್ ಶೀಟ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷ ಮೌಲಾನಾ ಮೊಹಮ್ಮದ್ ಹನೀಫ್ ರಜಾ ಖಾದ್ರಿ, ಅಧ್ಯಕ್ಷ ಮೌಲಾನಾ ಖಾಜಿ ಮೊಹಮ್ಮದ್ ಇಲ್ಯಾಜ್ ಖಾದ್ರಿ, ಕಾರ್ಯದರ್ಶಿ ಮೌಲಾನಾ ಮೊಹಮ್ಮದ್ ಅಲಿ ರಜಾ ಖಾದ್ರಿ, ಖಜಾಂಚಿ ಮೌಲಾನಾ ಅಷ್ಫಾಕ್, ಮೌಲಾನಾ ಹಯಾತವುಲ್ಲಾ, ಮೌಲಾನಾ ಸಿತಾಜ್, ನೂರಿ, ಮೌಲಾನಾ ಸನಾವುಲ್, ಮುಸ್ತಫಾ, ಜಾವೀದ್ ಹಾಗೂ ಫಯಾಜ್ ಉಪಸ್ಥಿತರಿದ್ದರು.

## ಲಯನ್ಸ್ ಕ್ಲಬ್‌ನಿಂದ ವನಮಹೋತ್ಸವ




ದಾವಣಗೆರೆ, ಸೆ. 17- ದಾವಣಗೆರೆ ಲಯನ್ಸ್ ಕ್ಲಬ್ ಮತ್ತು ವಿದ್ಯಾನಗರ ಲಯನ್ಸ್ ಕ್ಲಬ್ ಸಹಯೋಗದೊಂದಿಗೆ ವನಮಹೋತ್ಸವ ಕಾರ್ಯಕ್ರಮವನ್ನು ಬಾತಿ ಗುಡ್ಡದ ಶ್ರೀ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಸಸಿ ನೆಡುವ ಮೂಲಕ ಆಚರಿಸಲಾಯಿತು.

ಲಯನ್ಸ್ ಕ್ಲಬ್‌ನ ಉಭಯ ಅಧ್ಯಕ್ಷರುಗಳಾದ ಎಸ್.ಜಿ. ಉಳವಯ್ಯ, ಪ್ರಭುದೇವ್, ಪಿಡಿಜಿ ಹೆಚ್.ಎನ್. ಶಿವಕುಮಾರ್, ಬೆಳ್ಳೂಡಿ ಶಿವಕುಮಾರ್, ಕಾರ್ಯದರ್ಶಿಗಳಾದ ಅಜಯ್ ನಾರಾಯಣ್, ಅರವಿಂದ್, ಖಜಾಂಚಿ ಶೀತಲ್ ಕುಮಾರ್. ಸಹ ಕಾರ್ಯದರ್ಶಿ ಹೆಚ್ ಎಂ ನಾಗರಾಜ್, ಎಂ ಬಸವರಾಜಪ್ಪ, ರಮೇಶ್.,ಪರಶುರಾಮ ಭಾಗವಹಿಸಿದ್ದರು.

## ಮಹಾತ್ಮ ಶಾಲೆಯಲ್ಲಿ ಕಣ್ಣಿನ ತಪಾಸಣೆ



ದಾವಣಗೆರೆ, ಸೆ. 17- ನಗರದ ಅಕ್ಕಮಹಾದೇವಿ ಸಮಾಜದ ನೇತ್ರದಾನ ಪ್ರೇರಣಾ ಸಮಿತಿಯಿಂದ ಮಹಾತ್ಮ ವಿದ್ಯಾಶಾಲೆಯ ಪ್ರೌಢಶಾಲೆ ಮಕ್ಕಳ ಕಣ್ಣಿನ ತಪಾಸಣೆ ನಡೆಸಲಾಗಿದ್ದು, ದಿನಾಂಕ 20ರಂದು ನಡೆಯುವ ಕಾರ್ಯಕ್ರಮದಲ್ಲಿ ಕನ್ನಡಕ ವಿತರಿಸಲಾಗುವುದು ಎಂದು ತಿಳಿಸಲಾಯಿತು. ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು, ಸದಸ್ಯರು ಹಾಗೂ ಚಿಗಟೇರಿ ಆಸ್ಪತ್ರೆಯ ನೇತ್ರ ತಜ್ಞರು ಉಪಸ್ಥಿತರಿದ್ದರು.

## ಹಿಂದೂ ಮಹಾಗಣಪತಿ ವಿಸರ್ಜನಾ ಮೆರವಣಿಗೆ



ಹರಪನಹಳ್ಳಿ

ಹರಪನಹಳ್ಳಿ, ಸೆ. 17 - ಪಟ್ಟಣದ ಹಿಂದೂ ಮಹಾಗಣಪತಿ ವಿಸರ್ಜನಾ ಮೆರವಣಿಗೆ ಮಂಗಳವಾರ ವಿಜೃಂಭಣೆಯಿಂದ ನಡೆಯಿತು. ಕೋಟೆ ಆಂಜನೇಯ ದೇವಸ್ಥಾನದಿಂದ ಆರಂಭವಾದ ಮೆರವಣಿಗೆ ರಾಜ ಸೋಮಶೇಖರನಾಯಕ ವೃತ್ತ, ಹರಿಹರ-ಹೊಸಪೇಟೆ ಮುಖ್ಯ ರಸ್ತೆಯ ಮೂಲಕ ಹೊಸ ಬಸ್ ಸ್ಟ್ಯಾಂಡ್, ಹಳೇಬಸ್ ಸ್ಟ್ಯಾಂಡ್, ಪ್ರವಾಸಿ ಮಂದಿರ ವೃತ್ತದ ಮೂಲಕ ನಾಯಕನ ಕೆರೆಯಲ್ಲಿ ವಿಸರ್ಜನೆ ಮಾಡಲಾಯಿತು. ಸುತ್ತಮುತ್ತ ಗ್ರಾಮಗಳ ಸಾವಿರಾರು ಯುವಕರು ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸಿದರು.

ಯುವಕ, ಯುವತಿಯರು, ಮಕ್ಕಳು, ಹಿರಿಯರು ಹೀಗೆ ಎಲ್ಲರೂ ಭವ್ಯ ಮೆರವಣಿಗೆಗೆ ಸಾಕ್ಷಿಯಾದರು. ರಸ್ತೆ ಯುದ್ದಕ್ಕೂ ಪೊಲೀಸರು ಬಿಗಿ ಬಂದೋಬಸ್ತ್ ಕಲ್ಪಿಸಿದ್ದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಮೆರವಣಿಗೆಯಲ್ಲಿ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದರು. ಜೊತೆಗೆ ಭಜರಂಗ ದಳ ಹಾಗೂ ವಿಶ್ವ ಹಿಂದೂ ಪರಿಷತ್ ನೇತೃತ್ವದ ತಂಡ ಸಹ ಎಲ್ಲಿಯೂ ಸಮಸ್ಯೆ ಆಗದಂತೆ ಎಚ್ಚರ ವಹಿಸಿದ್ದರು. ಇನ್ನು ಒಳ ಬರುವ ಪ್ರಮುಖ ರಸ್ತೆಗಳನ್ನು ತಾತ್ಕಾಲಿಕವಾಗಿ ಬಂಬೂಗಳಿಂದ ಬ್ಯಾರಿಕೇಡ್ ಹಾಕಿ ಬಂದ್ ಮಾಡಲಾಗಿತ್ತು.

## ವೀರೇಶ್ವರ ಪುಣ್ಯಾಶ್ರಮದ ಅಂಧ ಮಕ್ಕಳ ಕಣ್ಣಿನ ತಪಾಸಣೆ



ದಾವಣಗೆರೆ, ಸೆ. 17- ನಗರದ ಅಕ್ಕಮಹಾದೇವಿ ಸಮಾಜದ ನೇತ್ರದಾನ ಪ್ರೇರಣಾ ಸಮಿತಿಯಿಂದ ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದ ಅಂಧ ಮಕ್ಕಳ ಕಣ್ಣಿನ ತಪಾಸಣೆ ನಡೆಸಿ ಉಚಿತ ಕನ್ನಡಕ ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು, ಸದಸ್ಯರು ಹಾಗೂ ಚಿಗಟೇರಿ ಆಸ್ಪತ್ರೆಯ ನೇತ್ರ ತಜ್ಞರು ಉಪಸ್ಥಿತರಿದ್ದರು.

## ಬುಲ್ಡೋಜರ್ ನ್ಯಾಯಕ್ಕೆ ಅ.1ರವರೆಗೆ ಸುಪ್ರೀಂ ತಡೆ

**(1ನೇ ಪುಟದಿಂದ)** ಸಾರ್ವಜನಿಕ ಸ್ಥಳಗಳ ಒತ್ತುವರಿ ಮಾಡಿಕೊಂಡಿರುವ ಕಟ್ಟಡಗಳಿಗೆ ಅನ್ವಯಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಅಕ್ರಮ ಕಟ್ಟಡಗಳ ಧ್ವಂಸಕ್ಕೆ ಸಂಬಂಧಿಸಿದಂತೆ ದೇಶವ್ಯಾಪಿ ಜಾರಿಯಾಗುವ ಮಾರ್ಗಸೂಚಿ ರೂಪಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಕಳೆದ ಸೆಪ್ಟೆಂಬರ್ 2ರಂದು ತಿಳಿಸಿತ್ತು. ಈ ಆದೇಶದ ನಂತರವೂ ಬುಲ್ಡೋಜರ್ ಹರಿಸುತ್ತಿರುವ ಹೇಳಿಕೆಗಳು ಬಂದಿವೆ ಎಂದು ಸುಪ್ರೀಂಕೋರ್ಟ್ ಪೀಠ ಹೇಳಿದೆ.

## ಮಹಿಳೆಯರ ರಾತ್ರಿ ಪಾಳೆ ನಿರ್ಬಂಧಕ್ಕೆ ಸುಪ್ರೀಂ ಆಕ್ಷೇಪ

**(1ನೇ ಪುಟದಿಂದ)** ಪಾಳೆಯಲ್ಲಿ ಕೆಲಸ ಮಾಡಬಾರದು ಎಂದು ಹೇಗೆ ಹೇಳಲು ಸಾಧ್ಯ? ರಾತ್ರಿ ಪಾಳೆಯಲ್ಲಿ ಕೆಲಸ ಮಾಡದಂತೆ ನಿರ್ಬಂಧಿಸಿದರೆ ಮಹಿಳೆಯರು ಆಕ್ಷೇಪಿಸಲಿದ್ದಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಹಿಳೆಯರು ವಿನಾಯಿತಿಗಳನ್ನು ಬಯಸುವುದಿಲ್ಲ, ಅವರು ಸಮಾನ ಅವಕಾಶಗಳನ್ನು ಬಯಸುತ್ತಾರೆ. ಮಹಿಳಾ ವೈದ್ಯರು ರಾತ್ರಿ ವೇಳೆ ಕೆಲಸ ಮಾಡದಂತೆ ತಡೆಯುವುದು ಏಕೆ? ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಪಶ್ಚಿಮ ಬಂಗಾಳ ಸರ್ಕಾರ ತಕ್ಷಣವೇ ಅಧಿಸೂಚನೆಯನ್ನು ಸರಿಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಸುರಕ್ಷತೆ ಒದಗಿಸುವುದು ನಿಮ್ಮ ಕರ್ತವ್ಯ. ಮಹಿಳಾ ವೈದ್ಯರು ರಾತ್ರಿ ಪಾಳೆಯಲ್ಲಿ ಕೆಲಸ ಮಾಡುವಂತಿಲ್ಲ ಎಂದು ಹೇಳಲಾಗದು. ಪೈಲೆಟ್‌ಗಳು, ಸೈನ್ಯ ಹಾಗೂ ಇತರರು ರಾತ್ರಿ ಪಾಳೆಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಈ ರೀತಿಯ ನಿರ್ಬಂಧ ಮಹಿಳಾ ವೈದ್ಯರ ವೃತ್ತಿಯ ಮೇಲೆ ಪರಿಣಾಮ ಬೀರುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ರಾಜ್ಯ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಾಲ್, ಇದು ಕೇವಲ ತಾತ್ಕಾಲಿಕ ಕ್ರಮ. ರಾಜ್ಯ ಸರ್ಕಾರ ತಿದ್ದುಪಡಿ ಆದೇಶ ಹೊರಡಿಸಲಿದೆ ಎಂದು ಹೇಳಿದರು.

## ಯಕ್ಷಗಾನ ಕಲೆಗೆ ತನ್ನದೇ ಆದ ನೆಲೆ ಇದೆ

### ಮೂಡಲಪಾಯ ತರಬೇತಿ ಕಾರ್ಯಕ್ರಮದಲ್ಲಿ ಅಕಾಡೆಮಿ ಸದಸ್ಯ ಪುಟ್ಟಸ್ವಾಮಿ

ಹರಪನಹಳ್ಳಿ

ಹರಪನಹಳ್ಳಿ, ಸೆ.17- ಯಕ್ಷಗಾನ ಕಲೆಗೆ ತನ್ನದೇ ಆದ ಸಾಹಿತ್ಯದ ನೆಲೆ ಇದೆ ಮತ್ತು ದೊಡ್ಡ ಚರಿತ್ರೆಯನ್ನೇ ಹೊಂದಿದೆ ಎಂದು ಯಕ್ಷಗಾನ ಅಕಾಡೆಮಿ ಸದಸ್ಯ ಪುಟ್ಟಸ್ವಾಮಿ ಹೇಳಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಆದರ್ಶ ಮಹಿಳಾ ಮಂಡಳಿ ಹಾಗೂ ಯಕ್ಷಗಾನ ಅಕಾಡೆಮಿ ಸಹಯೋಗದೊಂದಿಗೆ ಮೂಡಲಪಾಯ ತರಬೇತಿ ಕಾರ್ಯಕ್ರಮದ ಉದ್ಘಾಟನೆ ನೇರವೇರಿಸಿ ಅವರು ಮಾತನಾಡಿದರು.

ಯಕ್ಷಗಾನದಿಂದ ಬುದ್ದಿ ಚುರುಕುಗೊಳ್ಳುತ್ತದೆ. ಯಕ್ಷಗಾನ ಸಾಹಿತ್ಯದ ಉಗಮ ಮತ್ತು ವಿಕಾಸ, ಪಡುವಲಪಾಯ-ಪ್ರಸಂಗ ಸಾಹಿತ್ಯ, ಮೂಡಲಪಾಯ -ಪ್ರಸಂಗ ಸಾಹಿತ್ಯ, ಯಕ್ಷಗಾನದಲ್ಲಿ ಪ್ರಯೋಗ ಶೀಲತೆ, ಮೌಖಿಕ ಸಾಹಿತ್ಯ, ಸಂಶೋಧನೆ ಮತ್ತು ವಿಮರ್ಶೆ, ಪ್ರಮುಖ ಕವಿಗಳು- ಹೀಗೆ ಒಟ್ಟು ಏಳು ಅಧ್ಯಾಯಗಳಲ್ಲಿ ಸಾಗುವ ಈ ಕೃತಿ ಯಕ್ಷಗಾನದ ಒಟ್ಟು ಸ್ವರೂಪವನ್ನು ಒಂದೇ ತೆಕ್ಕೆಗೆ ಪರಿಚಯಿಸಿಬಿಡುತ್ತದೆ ಎಂದರು.

ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತ ಬಿ.ಪರುಶುರಾಮ ಪ್ರಸ್ತಾವಿಕವಾಗಿ ಮಾತನಾಡಿ, ಭಾವ, ರಾಗ, ತಾಳದಿಂದ ಮನುಷ್ಯ ಪರಿಪೂರ್ಣ ನಾಗುತ್ತಾನೆ. ಮೂಡಲಪಾಯ ನಾಟಕ, ದೊಡ್ಡಾಟಗಳಿಂದ ಮನುಷ್ಯ ಪರಿಶುದ್ಧ ರಾಗುತ್ತಾನೆ ಎಂದರು.

ಆದರ್ಶ ಮಹಿಳಾ ಮಂಡಳಿ ಅಧ್ಯಕ್ಷರಾದ ಮೈದೂರು ಶಿಲ್ಪಾ ಮಾತನಾಡಿ, ಯಾವುದೇ ಪಾತ್ರ ಮಾಡಿದರೂ ಕೂಡ ನಾವು ಪರಕಾಯ ಪ್ರವೇಶ ಮಾಡಿದರೆ ಉತ್ತಮ ಅಭಿನಯ ಮಾಡಬಹುದು. ಶಿಕ್ಷಣದ ಜೊತೆ ಕಲೆ, ಸಾಹಿತ್ಯ, ಸಂಗೀತ ಕ್ರೀಡೆಗಳಲ್ಲಿ ಭಾಗವಹಿಸಿದರೆ ಉತ್ತಮ ಜೀವನವನ್ನು ರೂಪಿಸಿಕೊಳ್ಳಬಹುದು ಎಂದರು.

ಮುಖ್ಯ ಶಿಕ್ಷಕ ಚೇತನ್ ಬಣಕಾರ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಯಕ್ಷಗಾನ ಸಾಹಿತ್ಯದಲ್ಲಿ ಆರತಿ ಹಾಡು, ಸೋಬಾನೆ ಹಾಡುಗಳ ಚೆಲುವು, ಗಾದೆ ಮಾತು, ಭಾಷಾ ಪ್ರಯೋಗದ ಸೌಂದರ್ಯ, ಭಾವಗೀತಾತ್ಮಕತೆ, ಮಾರ್ಗ-ದೇಸಿಗಳ ಸಮ್ಮಿಶ್ರ ಸೌಂದರ್ಯ, ಶಬ್ದಾಲಂಕಾರ, ಅರ್ಥಾಲಂಕಾರಗಳ ಬೆಡಗು, ರೂಪಕ-ಪ್ರಹೇಲಿಕೆಗಳ ಮೆರವಣಿಗೆ ಹೇಗೆ ಪ್ರಭಾವಿಸಿವೆ ಎಂಬುದನ್ನು ಚರ್ಚಿಸಲಾಗಿದೆ. ಎಲ್ಲವನ್ನೂ ಹೀರಿಕೊಂಡು ಅದು ಹೇಗೆ ಶ್ರೀಮಂತವಾಯಿತು ಮತ್ತು ಅವೆಲ್ಲವೂ ಯಕ್ಷಗಾನ ಸಾಹಿತ್ಯದಲ್ಲಿ ಹೇಗೆ ನಿಹಿತವಾಗಿದ್ದವು ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ಉಪನ್ಯಾಸಕರಾದ ಆನಂದ ಕರುವಿನ, ಶಿಕ್ಷಕರಾದ ಹೊನ್ನಪ್ಪ, ಟಿ. ಶಶಿಕಲಾ, ಡಿ. ಮಾಲವಿ ಹಿರೇಮಠ್, ಸುಧಾ ಜಿ, ಶರಣಮ್ಮ ಕೆ, ಶಶಿಕಲಾ ಎಂ ಸೇರಿದಂತೆ ಇತರರು ಇದ್ದರು.



## ಸ್ಮಾರ್ಟ್ ಸಿಟಿಯಾಗಿ ಕಲಬುರಗಿ

**(1ನೇ ಪುಟದಿಂದ)** ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ರೂಪಿಸುವ ಬಹುದಿನಗಳ ಬೇಡಿಕೆಗೆ ಒಪ್ಪಿಗೆ ನೀಡಲಾಗಿದೆ ಕಲಬುರಗಿಯನ್ನು ಕಲ್ಯಾಣದ ಕರ್ನಾಟಕದ ರಾಜಧಾನಿ ಎಂದು ಪರಿಗಣಿಸಲಾಗಿದೆ.

ಸಂಪುಟದಲ್ಲಿ 12,692 ಕೋಟಿ ರೂ.ಗಳ ವಿಸ್ತೃತ ಯೋಜನಾ ವರದಿಗಳಿಗೆ ಒಪ್ಪಿಗೆ ನೀಡಲಾಗಿದೆ. ಇವುಗಳಲ್ಲಿ 11,770 ಕೋಟಿ ರೂ. ಮೊತ್ತದ 46 ಯೋಜನೆಗಳು ಕಲ್ಯಾಣ ಕರ್ನಾಟಕಕ್ಕೆ ಸೇರಿದವುಗಳಾಗಿವೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಬೀದರ್ ಹಾಗೂ ಕಲಬುರಗಿ ಜಿಲ್ಲೆಗಳ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ 7,200 ಕೋಟಿ ರೂ.ಗಳ ಯೋಜನೆಗಳಿಗೂ ಸಂಪುಟದಲ್ಲಿ ಒಪ್ಪಿಗೆ ನೀಡಲಾಗಿದೆ. ಕೇಂದ್ರ ಸರ್ಕಾರಕ್ಕೆ ಈ ಪ್ರಸ್ತಾವನೆ ಕಳಿಸಲಾಗುವುದು. 3,600 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಭರಿಸುವಂತೆ ಕೇಳಲಾಗುವುದು. ಉಳಿದ ಹಣವನ್ನು ರಾಜ್ಯ ಸರ್ಕಾರ ಭರಿಸಲಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಈ ಭಾಗದಲ್ಲಿ ಖಾಲಿ ಇರುವ 17,439 ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲೂ ಸಹ ನಿರ್ಧರಿಸಲಾಗಿದೆ.

ಕಲಬುರಗಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪಿಎಂ ಮಿತ್ರ ಜವಳಿ ಪಾರ್ಕ್‌ಗೆ ನೀರು ಸರಬರಾಜು, ಭೀಮಾ ನದಿಗೆ ಅಡ್ಡವಾಗಿ ಅಣೆಕಟ್ಟು ಮುಂತಾದ ಕಾಮಗಾರಿಗಳಿಗೆ 390 ಕೋಟಿ ರೂ. ನೀಡಲು ನಿರ್ಧರಿಸಲಾಗಿದೆ.

2024-25ರ ಬಜೆಟ್‌ನಲ್ಲಿ ಕಲ್ಯಾಣ ಕರ್ನಾಟಕಕ್ಕೆ ಪ್ರಕಟಿಸಲಾಗಿದ್ದ ಎಲ್ಲ ಯೋಜನೆಗಳಿಗೆ ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ 45 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ 31 ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. 9 ಆಸ್ಪತ್ರೆಗಳನ್ನು ತಾಲ್ಲೂಕು ಹಾಗೂ ಎರಡು ಆಸ್ಪತ್ರೆಗಳನ್ನು ಜಿಲ್ಲಾ ಆಸ್ಪತ್ರೆಗಳಾಗಿ ಮೇಲ್ದರ್ಜೆಗೆ ಏರಿಸಲಾಗುವುದು. ಇದರ ಒಟ್ಟು ವೆಚ್ಚ 890 ಕೋಟಿ ರೂ. ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ ಅನುಭವ ಮಂಟಪದಿಂದ ಅಂಜನಾದ್ರಿ ಬೆಟ್ಟದವರೆಗೆ ಎಲ್ಲಾ ಪ್ರವಾಸಿ ತಾಣಗಳು ಹಾಗೂ ಸ್ಮಾರಕಗಳ ಸಂಬಂಧದ ಪ್ರಸ್ತಾವನೆಗಳನ್ನು ಸಂಪುಟದ ಎದುರು ತಂದು ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದರು. ಇದಕ್ಕೂ ಮುಂಚೆ ಮಾತನಾಡಿದ್ದ ಸಿದ್ದರಾಮಯ್ಯ, ಕಲಬುರಗಿಯನ್ನು 1,685 ಕೋಟಿ ರೂ. ವೆಚ್ಚದಲ್ಲಿ ಸ್ಮಾರ್ಟ್ ಸಿಟಿ ಆಗಿ ಅಭಿವೃದ್ಧಿ ಪಡಿಸಲು ನಿರ್ಧರಿಸಲಾಗಿದೆ ಎಂದಿದ್ದರು.

ಕಲ್ಯಾಣ ಕರ್ನಾಟಕ ಭಾಗದ ರಸ್ತೆಗಳ ಸುಧಾರಣೆಗಾಗಿ 'ಕಲ್ಯಾಣ ಪಥ' ಎಂಬ ಯೋಜನೆ ರೂಪಿಸಲಾಗಿದೆ ಎಂದೂ ಅವರು ಹೇಳಿದ್ದರು. ಇದರ ಅನ್ವಯ ರಾಜ್ಯ ಸರ್ಕಾರ ಗ್ರಾಮೀಣ ಭಾಗದಲ್ಲಿ 1,150 ಕಿ.ಮೀ. ರಸ್ತೆಯನ್ನು ಸಾವಿರ ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಿದೆ.

ಕೊಪ್ಪಳದ ಅಂಜನಾದ್ರಿ ಬೆಟ್ಟ ಹಾಗೂ ಸುತ್ತಲಿನ ಪ್ರದೇಶದ ಅಭಿವೃದ್ಧಿಗೆ 100 ಕೋಟಿ ರೂ. ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದರು.

ಬಳ್ಳಾರಿಯಲ್ಲಿ ಜೀನ್ಸ್ ಅಪರೆಲ್ ಪಾರ್ಕ್ ಹಾಗೂ ಕಾಮನ್ ಫೆಸಿಲಿಟಿ ಸೆಂಟರ್ ಆರಂಭಿಸಲಾಗುವುದು. ಇದು ಇಲ್ಲಿನ ಅಸಂಘಟಿತ ಜೀನ್ಸ್ ವಲಯವನ್ನು ವಿಶ್ವ ದರ್ಜೆಗೆ ಏರಿಸಲಿದೆ ಎಂದೂ ಅವರು ತಿಳಿಸಿದ್ದರು.

ಕಲ್ಯಾಣ ಕರ್ನಾಟಕ ಪ್ರದೇಶದ ಶಿಕ್ಷಣ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆ ತರಲು ಮಂಡಳಿಯು ಈ ವರ್ಷ ಸಹ 1,250 ಕೋಟಿ ರೂ. ಅನುದಾನವನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಟ್ಟು 'ಅಕ್ಷರ ಆವಿಷ್ಕಾರ' ಕಾರ್ಯಕ್ರಮಕ್ಕೆ ಇನ್ನಷ್ಟು ಶಕ್ತಿ ತರಲು ನಿರ್ಧರಿಸಲಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದ್ದರು.

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x5 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ರೂಂ ಬಾಡಿಗೆಗೆ ಇದೆ**
ದಾವಣಗೆರೆ ಮಹಾಲಕ್ಷ್ಮಿ ಬಡಾವಣೆಯಲ್ಲಿ ಸುಸಜ್ಜಿತವಾದ ದೊಡ್ಡ ರೂಂ ಬಾಡಿಗೆಗೆ ಇದೆ. ಮಹಿಳೆಯರಿಗೆ ಮಾತ್ರ. Call :
87489 47072

**ನೇರ ಸಂದರ್ಶನ**
ದಾವಣಗೆರೆಯ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್ ಗೆ ಕ್ಯಾಷಿಯರ್ ಮಹಿಳೆಯರು ಎರಡು ಮೂರು ವರ್ಷ ಅನುಭವ, ಸರ್ವಿಸ್ ಹಾಗೂ ಕ್ಲೀನ್ ಮಾಡಲು ಹುಡುಗರು ಮತ್ತು ಮಹಿಳೆಯರು ಪಾರ್ಟ್ ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಜೆ 6 ರಿಂದ ರಾತ್ರಿ 11ರ ವರೆಗೆ. ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
9448980070, 8884704025

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse) ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**HOUSE FOR LEASE / RENT**
2 BHK- 30x50, 2nd floor 5th cross, Mahalakshmi Badavane, Behind Kaveri Apartment, Davanagere.
99809 33002

**ಮತ್ಸ್ಯದ ಮನೆ**
ಮನೆಯಲ್ಲಿ ಬಾಳೆ ಎಲೆ ಮೀನಿನ ಊಟ.
95133 14666
ಪಿಸಾಳೆ ಕಾಪೌಂಡ್, ದಾವಣಗೆರೆ

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿ. : 01.10.2024 to 08.10.2024ರ ವರೆಗೆ
7 ದಿನಗಳ ದಕ್ಷಿಣ ಭಾರತದ ಪ್ರವಾಸ ಮಧುರೈ, ಪಳನಿ, ರಾಮೇಶ್ವರ, ಕನ್ಯಾಕುಮಾರಿ
ಕೇವಲ 15 ಸೀಟುಗಳಿವೆ ಆಸಕ್ತಿಯುಳ್ಳವರು ಕರೆಮಾಡಿ.
90086 26473, 94485 33928

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಸಬ್ ರಿಜಿಸ್ಟರ್ ಹತ್ತಿರ, ಅಶ್ವಿನಿ ಆಸ್ಪತ್ರೆ ಎದುರು, ಪಿ.ಬಿ. ರಸ್ತೆಯಿಂದ ಕುಂದುವಾಡ ರಸ್ತೆಗೆ ಹೋಗುವ 40 ಅಡಿ ರಸ್ತೆಗೆ ಪೂರ್ವ ದಿಕ್ಕಿನ 180x110x Sft ಇರುವ ಇಂಡಸ್ಟ್ರೀಯಲ್ ಖಾತಾ ಇರುವ ಹಾಲಿ ಬಾಡಿಗೆ ಬರುತ್ತಿರುವ, ಆಸ್ತಿ ಮಾರಾಟಕ್ಕಿದೆ. ಸಂಪರ್ಕಿಸಿ :
94481 80019, 98447 11299

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
Only for Girls / Ladies,
Qualification : SSLC to Degree,
Salary - 7000 to 10000/-
ಸ್ಥಳ : KR Market, Davanagere
95350 51589, 78670 75786

**1946 ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರರು ಬೇಕಾಗಿದ್ದಾರೆ
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್, ದಾವಣಗೆರೆ.
9900438052, 9740153513

**HOUSE FOR RENT**
# 5628/0-23, 2BHK Ground floor, 4th main, 6th Cross, (Left) East facing near Indoor Nehru Stadium, S.S. Badavane `B' Block, House Name **SHIVARATNA**, Conatct :
94489 29509

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**FLAT FOR LEASE**
3 BHK, Sqft :1888
**AM Apartment**
**Nainika Prime Rose**
Vidyanagar last city bus stop Davanagere.
89519 38228, 80502 22181

ನೇತ್ರ ದಾನ ಶ್ರೇಷ್ಠ ದಾನ

**WANTED NURSE**
Fresher or 1-2 years experienced candidates For Davangere
Contact
9945341590

**ಮನೆ ಬಾಡಿಗೆಗಿದೆ**
3378/313, 4ನೇ ಮೇನ್, 11ನೇ ಕ್ರಾಸ್, ಎಸ್.ಎಸ್. ಲೇಔಟ್, ಬಿ ಬ್ಲಾಕ್, ದಾವಣಗೆರೆ, 2ನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ
90084 82412

**ಮನೆ ಮಾರಾಟಕ್ಕಿದೆ**
ಕುಂಬಳೂರು, ಹರಿಹರ ತಾ||, ಶಿವಮೊಗ್ಗ - ಹರಿಹರ ರಸ್ತೆ, ನಿಟ್ಟೂರು ಕ್ರಾಸ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಉತ್ತರ ದಿಕ್ಕಿನ ಮನೆ (36'x68') ಮತ್ತು ಹಳೆ ಮನೆ (36' x 20') ಮಾರಾಟಕ್ಕೆ ಇದೆ. ಒಟ್ಟು ಜಾಗದ ಅಳತೆ : 36'x88'
7892587685, 9739903499

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**WANTED CIVIL ENGINEER'S**
Freshers or with 2-3 years Experienced. Projects at Bangalore and Davangere.
80880 50729, 89711 03671

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಬೇಕಾಗಿದ್ದಾರೆ**
ಫೀಲ್ಡ್ ಆಫೀಸರ್ ಕೆಲಸಕ್ಕೆ ಹುಡುಗರು ಮತ್ತು **TALLY** ಅನುಭವಿರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ಹದಡಿ ರೋಡ್, ದಾವಣಗೆರೆ .
97433 83672

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

**WANTED MARKETING EXECUTIVE**
2 to 3 years Experience, DAVANGERE.
63620 23451, 97434 37003

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಆಫೀಸ್ ಬಾಯ್ ಬೇಕಾಗಿದ್ದಾರೆ**
ಕೆಎಸ್‌ಎಸ್ ಸಲ್ಯೂಷನ್ ಸಿಎಸ್‌ಸಿ ಸೇವಾ ಸಿಂಧು SS ಲೇಔಟ್, ಬಿ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ, ದಾವಣಗೆರೆ. ಬೆ. 9 ರಿಂದ ಸಂಜೆ 6ರವರೆಗೆ Resume ನೊಂದಿಗೆ ಸಂಪರ್ಕಿಸಿ : ಸ್ವಂತ ವಾಹನ ಹೊಂದಿರುವವರು
72045 42910
kssdvg01@gmail.com

**WANTED**
Computer Billing Operators for Harihars Liquor Shops
Contact
99726 98591, 94490 37488

**WANTED Electrician Boy**
73537 25577
76187 96667

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water. **(Only for Veg)**
Vidyanagar last city bus stop, Davangere
8951938228, 8050222181

# ಅನಂತ ಚತುರ್ದಶಿ ಮಹಾತ್ಮೆ



ಹಿಂದೂ ಧಾರ್ಮಿಕ ಸಂಪ್ರದಾಯದಲ್ಲಿ ಭಾದ್ರಪದ ಶುದ್ಧ ಚತುರ್ದಶಿ ದಿನ ಅನಂತ ಪದ್ಮನಾಭ ವ್ರತ ಆಚರಿಸಲಾಗುತ್ತದೆ 14 ನೇ ದಿನಗಳ ಆಚರಿಸುವ ಈ ವ್ರತದಲ್ಲಿ 14ಲೋಕಗಳ ಅಧಿಪತಿ ಶ್ರೀ ವಿಷ್ಣುವನ್ನು ಪೂಜಿಸಬೇಕು ಯೋಗನಿದ್ರಾ ಸ್ವರೂಪಿಯಾದ ಪರಮಾತ್ಮ ಅನಂತ ಶಯನ ಮೂರ್ತಿ ಯಾಗಿ ಪೂಜೇಗೊಳ್ಳು ತ್ತಾನೆ ಅನಂತ ಎಂದರೆ ಶೇಷ ಆದಿ ಶೇಷನ ಮೇಲೆ ಪವಡಿಸಿದ ವಿಷ್ಣುವನ್ನು ಇಂದು ಪೂಜಿಸಬೇಕು ನಾಭಿಯಲ್ಲಿ ಕಮಲವನ್ನು ಹೊಂದಿ ರುವ ಇದು ಭಗವಂತನ ಮೂಲ ರೂಪವಾಗಿದೆ ನಾಭಿಯಿಂದ ಬ್ರಹ್ಮನನ್ನು ಸೃಷ್ಟಿ ಮಾಡಿದ ರೂಪವೇ ಅನಂತ ಪದ್ಮನಾಭ ರೂಪ ಅತ್ಯಂತ ಪವಿತ್ರವಾದ ವಿಷ್ಣುವಿನ ಈ ರೂಪವನ್ನು ಭಕ್ತಿಯಿಂದ ಪೂಜಿಸಿದರೆ ಸಕಲ ಸೌಭಾಗ್ಯ ಲಭಿಸಿ ಮೋಕ್ಷವು ಲಭಿಸುವುದು ಈ ವ್ರತವು ಬಹು ಮಹಿಮೆಯುಳ್ಳ ವ್ರತ ಇದನ್ನು ಆಚರಿಸುವುದರಿಂದ ಇಷ್ಟಾರ್ಥಗಳು ಸಿದ್ಧಿ ಯಾಗುವುದರಿಂದ ಇದಕ್ಕೆ ಕಾಮ್ಯ ವ್ರತ ವೆಂದು ಕರೆಯುತ್ತಾರೆ. ದ್ವಾಪರದಲ್ಲಿ ಪಾಂಡವರು ಜೂಜಾಟ ದಲ್ಲಿ ಸೋತು ಕಾಡು ಮೇಡು ಅಲೆ ಯುತ್ತಿದ್ದಾಗ ಶ್ರೀ ಕೃಷ್ಣನು ಧರ್ಮರಾಯನಿಗೆ ಈ ವ್ರತ ಮಾಡುವಂತೆ ಉಪದೇಶಿಸಿದನು ಧರ್ಮರಾಯ ಭಕ್ತಿಯಿಂದ ಈ ವ್ರತ ಮಾಡಿದ್ದರಿಂದ ಅವರಿಗೆ ಕುರುಕ್ಷೇತ್ರ ಯುದ್ಧದಲ್ಲಿ ಜಯ ಲಭಿಸಿ ಮುಂದೆ ತಮ್ಮ ರಾಜ್ಯವು ದೊರಕಿತು

ಈ ವ್ರತ ಮಾಡುವಾಗ ಧರಿಸುವ ದೋರ (ದಾರ )ಕ್ಕೂ ಅಷ್ಟೇ ಮಹತ್ವ ವಿದೆ ಈ ದಾರವನ್ನು ಉಪೇಕ್ಷೆ ಮಾಡಿದ ಕೌಂಡಿನ್ಯ ಮುನಿಯ ಸಂಪತ್ತು ಸೌಭಾಗ್ಯ ನಶಿಸಿ ಹೋಯಿತು ನಂತರ ಅನಂತ ಪದ್ಮನಾಭ ನನ್ನು ಭಕ್ತಯಿಂದ ಆರಾಧಿಸಿದ್ದರಿಂದ ಮತ್ತೆ ಸಂಪತ್ತು ಸೌಭಾಗ್ಯ ಲಭಿಸಿತು ಎಂದು ಉಲ್ಲೇಖವಿದೆ

ಇದನ್ನು ಭಕ್ತಿಯಿಂದ ದಂಪತಿಗಳು 14ವರ್ಷ ಆಚರಿಸಬೇಕು 14ಗಂಟಿನ ದಾರವನ್ನು ಧರಿಸಿ ಈ ವ್ರತಾಚಾರಣೆ ಮಾಡಬೇಕು ಇಂತಹ ಕಾಮಿತ ಫಲ ಕೊಡುವ ಈ ಶುಭದಿನದಂದು ಎಲ್ಲರಿಗೂ ಶುಭ ವಾಗಲಿ ಆರೋಗ್ಯಭಾಗ್ಯ ಕೊಟ್ಟು ಅನಂತ ಪದ್ಮನಾಭ ಸ್ವಾಮಿ ಕಾಪಾಡಲಿ ಎಂದು ಹಾರೈಸುವೆ.

**- ಕೋಮಲ ವಿ. ಕುಮಾರ್,**
ದಾವಣಗೆರೆ.

## ನಗರದಲ್ಲಿಂದು ಶ್ರೀ ಗಾಯತ್ರಿ ಪೂಜೆ ಉಪಾಸನೆ



ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಆಧ್ಯಾತ್ಮ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಅನಂತನ ಹುಣ್ಣಿಮೆ ಅಂಗವಾಗಿ ಇಂದು ಬೆಳಿಗ್ಗೆ 7ಕ್ಕೆ ಶ್ರೀ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ನಡೆಯಲಿದೆ ಎಂದು ಪರಿವಾರದ ಪರಿವಾರದ ಅಧ್ಯಕ್ಷ ಡಾ. ರಮೇಶ್ ಪಟೇಲ್ ತಿಳಿಸಿದ್ದಾರೆ. ಎಂ. ವೀರಭದ್ರರಾವ್ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ.

## ನ್ಯಾಮತಿ ತಾ.ನಲ್ಲಿ ಇಂದು ವಿದ್ಯುತ್ ವ್ಯತ್ಯಯ

ನ್ಯಾಮತಿ ತಾಲ್ಲೂಕಿನ ಚೀಲೂರು, ದೊಡ್ಡೇರಿ, ಮಳಲಿ, ಟಿ-ಗೋಪಗೊಂಡನಹಳ್ಳಿ, ತಗ್ಗಿಹಳ್ಳಿ, ಚಿ ಕಡದಕಟ್ಟೆ, ಮರಿಗೊಂಡನಹಳ್ಳಿ, ಕೆಂಗಟ್ಟೆ, ಕೋಟೆಹಾಳ್, ಕುರುನಾ, ಗೋವಿನಕೋವಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

# 'ರಜೆಯಿದ್ದರೂ ರಜೆ ಚೀಟಿ ಇಲ್ಲ, ಸಂಜೆ ಮಾಡುವ ಸಹಿ ಬೆಳಗ್ಗೆನೇ ಮಾಡಿದ ಶಿಕ್ಷಕರು.!'



**ಹೆಮ್ಮನಬೇತೂರು ಸರ್ಕಾರಿ ಶಾಲೆಗೆ ಶಾಸಕ ಕೆ.ಎಸ್ ಬಸವಂತಪ್ಪ ಭೇಟಿ-ಪರಿಶೀಲನೆ**

ದಾವಣಗೆರೆ,ಸೆ.17 - ಶಿಕ್ಷಕರು ರಜೆಯಿದ್ದರೂ ರಜೆ ಚೀಟಿ ಇಲ್ಲ, ಹಾಜರಿ ಪುಸ್ತಕದಲ್ಲಿ ಎಂಟ್ರಿ ಇಲ್ಲ. ಇನ್ನು ಕೆಲಸಕ್ಕೆ ಹಾಜರಿಯಾಗಿದ್ದರೂ ಕೂಡ ಸಂಜೆ ಮಾಡುವ ಸಹಿಯನ್ನು ಬೆಳಗ್ಗೆಯೇ ಮಾಡಿರುವುದನ್ನು ಕಂಡ ಶಾಸಕ ಕೆ.ಎಸ್.ಬಸವಂತಪ್ಪ ಶಿಕ್ಷಕರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಹೆಮ್ಮನಬೇತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮಂಗಳವಾರ ದಿಢೀರ್ ಭೇಟಿ ನೀಡಿದ ಶಾಸಕರು, ಶೌಚಾಲಯ, ಭೋಜನಾಲಯ, ಶೈಕ್ಷಣಿಕ ಪ್ರಗತಿ, ಶಿಕ್ಷಕರ ಹಾಜರಿ ಪುಸ್ತಕ, ಮಧ್ಯಾಹ್ನದ ಬಿಸಿಯೂಟದ ಮೆನು, ಮಕ್ಕಳ ಹಾಜರಿಯನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ನಾಲ್ವರು ಶಿಕ್ಷಕರಲ್ಲಿ ಇಬ್ಬರು ಶಿಕ್ಷಕರು ರಜೆ ಇದ್ದರು. ಆದರೆ ರಜೆ ಚೀಟಿ ಬರೆದಿಲ್ಲ. ರಜೆಯಲ್ಲಿ ಹೋಗಿದ್ದರು. ಹೋದರೂ ಹಾಜರಿ ಪುಸ್ತಕದಲ್ಲಿ ಎಂಟ್ರಿ ಮಾಡಿರಲಿಲ್ಲ. ಇನ್ನಿಬ್ಬರು ಶಿಕ್ಷಕರು ಹಾಜರಿ ಪುಸ್ತಕದಲ್ಲಿ ಸಂಜೆ ಮಾಡುವ ಸಹಿಯನ್ನು ಬೆಳಗ್ಗೆ ಮಾಡಿದ್ದರು. ಇದನ್ನು ಕಂಡ ಶಾಸಕರು ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡರು.

ಈ ವೇಳೆ ಮಕ್ಕಳು, ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮೊಟ್ಟೆ ಕೊಡುತ್ತಿಲ್ಲ. ವಾರಕ್ಕೆ ಎರಡು ಮೊಟ್ಟೆ ಕೊಡಬೇಕು. ವಾರಕ್ಕೆ ಒಂದೇ ಮೊಟ್ಟೆ ಕೊಡ್ತಾರೆ, ಇಲ್ಲದಿದ್ದರೆ ಇಲ್ಲ ಎಂದು ಶಾಸಕರಿಗೆ ಇಲ್ಲಿನ ಸಮಸ್ಯೆ ಬಿಚ್ಚಿಟ್ಟರು.

ಇದರಿಂದ ಗರಂ ಆದ ಶಾಸಕರು, ಸರ್ಕಾರ ಕೊಡುವ ಸೌಲಭ್ಯಗಳನ್ನೇ ಮಕ್ಕಳಿಗೆ ಸರಿಯಾಗಿ ಕೊಡುವುದಿಲ್ಲ ಎಂದರೆ ಹೇಗೆ ? ಎಂದು ಪ್ರಶ್ನಿಸಿದರು.

ದೂರವಾಣಿ ಮೂಲಕ ಉತ್ತರ ವಲಯದ ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸಿದ ಶಾಸಕರು, ಇಲ್ಲಿನ ಸಮಸ್ಯೆ ಬಗ್ಗೆ ವಿವರಿಸಿದರು. ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ನೀಡಬೇಕು ಎಂದು ಸೂಚಿಸಿದರು.

ನರೇಗಾದಡಿ ಹೈಟೆಕ್ ಶೌಚಾಲಯ, ಭೋಜನಾಲಯ, ಶಾಲಾ ಕಾಂಪೌಂಡ್, ಆಟದ ಮೈದಾನ ನಿರ್ಮಾಣ ಮಾಡುವಂತೆ ಗ್ರಾಪಂ ಪಿಡಿಒ ಅವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ.ಚಂದ್ರಶೇಖರ್, ವಕೀಲ ಮಂಜಪ್ಪ, ಸದಸ್ಯ ದುರುಗಪ್ಪ, ತಿಪ್ಪೇಸ್ವಾಮಿ, ರೇವಣಸಿದ್ದಯ್ಯ, ರಂಗನಾಥ್, ಕರಿಬಸಪ್ಪ, ಬಸವಲಿಂಗಪ್ಪ, ಶಾಲೆಯ ಮುಖ್ಯ ಶಿಕ್ಷಕ ನಾಗರಾಜ್ ಇದ್ದರು.

# ಚಿಗಟೇರಿ ಕುಟುಂಬಕ್ಕೆ ದಾಸೋಹ ರತ್ನ ಪ್ರಶಸ್ತಿ



ದಾವಣಗೆರೆ, ಸೆ.17 - ನಗರದ ಕೊಡುಗೈ ದಾನಿಗಳಾದ ಮುರಿಗೆಪ್ಪ ಚಿಗಟೇರಿ, ಈ ಮನೆತನದ ಸಮಾಜ ಸೇವೆ ಮತ್ತು ದಾಸೋಹ ಮನೋಭಾವ ಗುರುತಿಸಿದ ಬೆಂಗಳೂರಿನ ಬಸವ ಸಮಿತಿಯು 'ದಾಸೋಹ ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ.

ಬೆಂಗಳೂರಿನ ಬಸವ ಸಮಿತಿ ಅನುಭವ ಮಂಟಪದಲ್ಲಿ ನಡೆದ ಡಾ.ಬಿ.ಡಿ ಜತ್ತಿ ಅವರ 112ನೇ ಜನ್ಮದಿನಾಚರಣೆ ಮತ್ತು ವಜ್ರ ಮಹೋತ್ಸವದಲ್ಲಿ ಚಿಗಟೇರಿ ಕುಟುಂಬದ ಸುಧಾ ಜಯಪ್ರಕಾಶ್ ಮತ್ತು ಮುರುಘ ರಾಜೇಂದ್ರ ಜೆ. ಚಿಗಟೇರಿ ಅವರಿಗೆ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್ ಪ್ರಶಸ್ತಿ ಪ್ರದಾನ ಮಾಡಿದರು.

ಈ ವೇಳೆ ಬೇಲಿ ಮಠಾಧ್ಯಕ್ಷ ಶಿವರುದ್ರ ಶ್ರೀಗಳು, ಬಸವ ಸಮಿತಿ ಅಧ್ಯಕ್ಷ ಡಾ. ಅರವಿಂದ್ ಜತ್ತಿ, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಬಿ.ಎಸ್ ಪರಮಶಿವಯ್ಯ, ಪ್ರಭುದೇವ್ ಚಿಗಟೇರಿ ಸೇರಿದಂತೆ ಗಣ್ಯರು ಇದ್ದರು.

# ಅಮ್ಮನ ಹೆಸರಿನಲ್ಲಿ ಗಿಡ ನೆಡುವ ಕಾರ್ಯಕ್ಕೆ ಚಾಲನೆ



ಮಲೇಬೆನ್ನೂರು, ಸೆ. 17- ಪಟ್ಟಣದ ಪುರಸಭೆ ಕಛೇರಿ ಮುಂಭಾಗದಲ್ಲಿ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಾಗೂ ಸ್ವಚ್ಛತೆಯೇ ಸೇವೆ - 2024 ರ ಅಂಗವಾಗಿ ಅಮ್ಮನ ಹೆಸರಿನಲ್ಲಿ ಒಂದು ಗಿಡ ನೆಡುವ ಕಾರ್ಯಕ್ರಮಕ್ಕೆ ಗಿಡ ನೆಡುವ ಮೂಲಕ ಚಾಲನೆ ನೀಡಲಾಯಿತು

ಪುರಸಭೆ ಉಪಾಧ್ಯಕ್ಷೆ ನಪ್ಸೀಯಾ ಬಾನು ಚಮನ್ ಷಾ, ಮುಖ್ಯಾಧಿಕಾರಿ ಭಜಕ್ಕನವರ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಖಲೀಲ್, ನಯಾಜ್, ಕೆ.ಜಿ. ಲೋಕೇಶ್, ಭೋವಿ ಶಿವು, ಸಾಬೀರ್ ಅಲಿ, ಷಾ ಅಬ್ರಾರ್, ದಾದಾಪೀರ್, ಬಿ. ಮಂಜುನಾಥ್, ಬೆಣ್ಣೆಹಳ್ಳಿ ಸಿದ್ದೇಶ್, ವಿಜಯಲಕ್ಷ್ಮೀ ಕೆ.ಪಿ. ಗಂಗಾಧರ್, ಸುಧಾ ಪಿ.ಆರ್. ರಾಜು, ಸುಮಯ್ಯ, ಎಂ.ಬಿ. ರುಸ್ತುಂ, ಬಿ. ವೀರಯ್ಯ, ಎ. ಆರೀಫ್ ಅಲಿ, ಭಾನುವಳ್ಳಿ ಸುರೇಶ್, ಯುಸೂಫ್, ಭೋವಿಕುಮಾರ್, ಓ.ಜಿ. ಕುಮಾರ್, ಜಿಗಳೇರ ಹಾಲೇಶಪ್ಪ, ಅಧಿಕಾರಿಗಳಾದ ದಿನಕರ್, ನವೀನ್, ಶಿವರಾಜ್, ಮಂಜುನಾಥ್ ಮತ್ತು ನಂದಿತಾವರೆಯ ವಿ.ಟಿ. ಬಸವರಾಜ್ ಅವರುಗಳು ಈ ವೇಳೆ ಭಾಗವಹಿಸಿದ್ದರು.

# ನಗರದಲ್ಲಿ ಇಂದು ವಿಕಸನ ಶಿಬಿರ

ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು ಹಾಗು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆದೇಶದಂತೆ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಪ್ರಥಮ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಒಂದು ವಾರದ ಕಾಲ ವಿಕಸನ ಶಿಬಿರವನ್ನು ನಡೆಸಲಾಗುತ್ತಿದೆ.

ಇಂದು ಬೆಳಿಗ್ಗೆ 10. 30 ಗಂಟೆಗೆ ಪ್ರಥಮ ವರ್ಷದ ಇಂಜಿನಿಯರಿಂಗ್ ವಿದ್ಯರ್ಥಿಗಳಿಗೆ ಸ್ವಾಗತ ಸಮಾರಂಭ ಮತ್ತು ಶಿಬಿರದ ಉದ್ಘಾಟನೆಯನ್ನು ಕಾಲೇಜಿನ ಎಸ್ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ದಾವಣಗೆರೆಯ ಸಂವೇದ ಎಜುಕೇಶನ್ ಮತ್ತು ರಿಚಾ ಸಂಸ್ಥೆಯ ಸಂಸ್ಥಾಪಕ ಮತ್ತು ಶಿಕ್ಷಣ ತಜ್ಞರಾದ ಡಾ. ಸುರೇಂದ್ರನಾಥ ಪಿ. ನಿಶಾನಿಮಠ, ಕಾಲೇಜಿನ ಪ್ರಾಚಾರ್ಯರಾದ ಡಾ.ಎಚ್. ಬಿ ಅರವಿಂದ್ ಭಾಗವಹಿಸಲಿದ್ದು, ಅಧ್ಯಕ್ಷತೆಯನ್ನು ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಬೇಂದ್ರಪ್ಪ ವಹಿಸಲಿದ್ದಾರೆ.

# ಧಾರ್ಮಿಕ ಪ್ರಚೋದನೆ ಪೋಸ್ಟ್ ಪ್ರತ್ಯೇಕ ಎರಡು ಪ್ರಕರಣ ದಾಖಲು

ದಾವಣಗೆರೆ, ಸೆ. 17- ಸಾಮಾಜಿಕ ಜಾಲ ತಾಣಗಳಲ್ಲಿ ಧಾರ್ಮಿಕ ಪ್ರಚೋದನೆ ಪೋಸ್ಟ್ ಹಾಕಿದ್ದಕ್ಕೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದೆ.

ಈದ್ ಮಿಲಾದ್ ಹಬ್ಬದ ಪ್ರಯುಕ್ತ ಒಂದು ಕೋಮಿನವರು ಹಸಿರು ಬಾವುಟನ್ನು ಅಹ್ಮದ್ ನಗರದ ಏರ್‌ಟೆಲ್ ಟವರ್ ಮೇಲೆ ಕಟ್ಟಿದ್ದು, ಇದನ್ನು ನೋಡಿ ಗಾಂಧಿ ನಗರದ ವಾಸಿ ಪ್ರಜ್ವಲ್ ಸೆ.15ರಂದು ಬೆಳಿಗ್ಗೆ ಟವರ್ ಹತ್ತಿ ಹಸಿರು ಬಾವುಟದ ಮೇಲೆ ಭಾಗವ ಧ್ವಜ ಕಟ್ಟಿ ಮೊಬೈಲ್‌ನಲ್ಲಿ ಚಿತ್ರೀಕರಿಸಿ ಸಾಮಾಜಿಕ ಜಾಲ ತಾಣಗಳಲ್ಲಿ ಹಾಕಿದ್ದಾನೆ. ಕೋಮು ಹಿಂಸೆಗೆ ಪ್ರೇರೇಪಿಸಿದ ಕಾರಣಕ್ಕಾಗಿ ಪ್ರಜ್ವರ್ ವಿರುದ್ಧ ಅಜಾದ್ ನಗರ ಠಾಣೆಯಲ್ಲಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಅಜಾದ್ ನಗರ ಏರ್‌ಟೆಲ್ ಟವರ್ ಮೇಲೆ ಹಸಿರು ಬಾವುಟ ನೋಡಿದ ಗಣೇಶ್ ಅಲಿಯಾಸ್ ಕ್ರಾಕ್ ಗಣಿ ಉದ್ದೇಶ ಪೂರ್ವಕವಾಗಿ ಹಸಿರು ಬಾವುಟದ ಮೇಲೆ ಭಾಗವಧ್ವಜ ಕಟ್ಟಲು ಏರುತ್ತಿರುವುದನ್ನು ಮೊಬೈಲ್‌ನಲ್ಲಿ ಚಿತ್ರಿಸಿಕೊಂಡು ಸಾಮಾಜಿಕ ಜಾಲ ತಾಣದಲ್ಲಿ ಹಾಕಿದ್ದಾನೆ.ಇವನ ಮೇಲೂ ಸಹ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

**ಎಸ್ಪಿ ಎಚ್ಚರಿಕೆ:** ಸಾಮಾಜಿಕ ಜಾಲತಾಣಗಳಲ್ಲಿ ಧಾರ್ಮಿಕ ನಿಂದನೆ, ಕೋಮು ಪ್ರಚೋದನಕಾರಿ, ಸುಳ್ಳು ಸುದ್ದಿಗಳನ್ನು, ವ್ಯಕ್ತಿ ನಿಂದನೆ ಪೋಸ್ಟ್‌ಗಳನ್ನು ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಎಚ್ಚರಿಸಿದ್ದಾರೆ.

ಯುವಕರು, ಶಾಲಾ ಕಾಲೇಜ್ ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವ ಮುಂಚೆ ಹೆಚ್ಚು ಜಾಗರೂಕತೆ ವಹಿಸಬೇಕು ಈ ಬಗ್ಗೆ ಪೋಷಕರುಗಳು ತಮ್ಮ ತಮ್ಮ ಮಕ್ಕಳಿಗೆ ಹಾಗೂ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು ಉಪನ್ಯಾಸಕರುಗಳು ಸೂಕ್ತ ತಿಳಿವಳಿಕೆ ನೀಡುವಂತೆ ಅವರು ಹೇಳಿದ್ದಾರೆ.

# ಹರಿಹರ : ಸಾರ್ವಜನಿಕ ಆಸ್ಪತ್ರೆ ಕಾಂಕ್ರೀಟ್ ರಸ್ತೆಯ ಕಾಮಗಾರಿಗೆ ಗುದ್ದಲಿ ಪೂಜೆ



ಹರಿಹರ, ಸೆ. 17 - ನಗರದಲ್ಲಿ ವಿವಿಧ ಬಡಾವಣೆ ರಸ್ತೆಗಳು ಬಹಳಷ್ಟು ಹಾಳಗಿದ್ದು ರಸ್ತೆ ದುರಸ್ತಿಗೆ ಸರ್ಕಾರ ಹಣವನ್ನು ಬಿಡುಗಡೆ ಮಾಡದೇ, ಇರುವುದಕ್ಕೆ ನಗರೋತ್ಥಾನ ಅಭಿವೃದ್ಧಿ ಕಾಮಗಾರಿಯಲ್ಲಿ ಉಳಿದಿರೋ ಹಣದಲ್ಲಿ ನಗರದ ಸಾರ್ವಜನಿಕ ಆಸ್ಪತ್ರೆ ರಸ್ತೆಯನ್ನು ದುರಸ್ತಿ ಪಡಿಸಲಾಗುತ್ತಿದೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಸಾರ್ವಜನಿಕ ಆಸ್ಪತ್ರೆ ಕಾಂಕ್ರೀಟ್ ರಸ್ತೆಯ ಕಾಮಗಾರಿಗೆ ಗುದ್ದಲಿ ಪೂಜೆ ಸಲ್ಲಿಸಿ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.


ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಉಪಾಧ್ಯಕ್ಷ ಜಂಬಣ್ಣ ಗುತ್ತೂರು, ನಗರಸಭೆ ಸದಸ್ಯ ಎಂ.ಎಸ್. ಬಾಬುಲಾಲ್, ಶಂಕರ್ ಖಟಾವ್ಕಾರ್, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ಜೆಡಿಸ್ ಪಕ್ಷದ ಮುಖಂಡ ಅಂಗಡಿ ಮಂಜುನಾಥ್, ಮಾರುತಿ ಬೇಡರ್, ಹಾಲಸ್ವಾಮಿ, ಬಿಜೆಪಿ ಪಕ್ಷದ ಮುಖಂಡ ಕೆ.ಜಿ. ಕೃಷ್ಣ, ಎನ್.ಇ. ಸುರೇಶ್, ಕಾಂಗ್ರೆಸ್ ಪಕ್ಷದ ಮುಖಂಡ ಸನಾವುಲಾ ಸಾಬ್ ಇತರರು ಹಾಜರಿದ್ದರು.

## ಲಕ್ಷ್ಮಿ ರಂಗನಾಥನಿಗೆ ಅನಂತ ಶಯನ ಅಲಂಕಾರ



ಮಲೇಬೆನ್ನೂರು, ಸೆ. 17 - ಸಮೀಪದ ಹೆಳವನಕಟ್ಟೆ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿಗೆ ಅನಂತ ಚತುರ್ದಶಿ ಅಂಗವಾಗಿ ಮಂಗಳವಾರ ಮಾಡಲಾಗಿದ್ದ ಅನಂತ ಶಯನ ಅಲಂಕಾರ ಭಕ್ತರ ಗಮನ ಸೆಳೆಯಿತು.

## ನಗರದಲ್ಲಿ ಇಂದು ಅನ್ನ ಸಂತರ್ಪಣೆ



ಶಿವಪ್ಪಯ್ಯ ವೃತ್ತದ ಶ್ರೀ ಗಜಾನನ ಯುವಕರ ಸಂಘ ಹಾಗೂ ಶ್ರೀ ಮಹಾಗಣಪತಿ ಶ್ರೀ ಶನ್ಯೈಶ್ವರ, ಶ್ರೀ ದುರ್ಗಾದೇವಿ ದೇವಸ್ಥಾನ ಸಮಿತಿಯ ವತಿಯಿಂದ ಹಮ್ಮಿಕೊಳ್ಳಲಾಗಿರುವ 47ನೇ ವರ್ಷದ ಗಣೇಶ ಮಹೋತ್ಸವದ ಅಂಗವಾಗಿ ಇಂದು ಮಧ್ಯಾಹ್ನ 12 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ನಾಳೆ ಗುರುವಾರ ಮಧ್ಯಾಹ್ನ 3 ಗಂಟೆಗೆ ಗಣಪತಿ ವಿಸರ್ಜನಾ ಕಾರ್ಯಕ್ರಮ ನೆರವೇರಲಿದೆ.

## ನಗರದಲ್ಲಿ ಇಂದು ಪ್ರತಿಭಟನೆ

ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿಗಳ ಒಕ್ಕೂಟದಿಂದ ನಗರ ಪಾಲಿಕೆ ಮುಂಭಾಗ ಇಂದು ಬೆಳಿಗ್ಗೆ 11ಕ್ಕೆ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ.ನಾಗಮಂಗಲ ದಲ್ಲಿ ಶ್ರೀ ಗಣೇಶ ವಿಸರ್ಜನೆಯ ಸಂದರ್ಭದಲ್ಲಿ ನಡೆದ ಕೋಮು ಗಲಭೆ, ನಂತರದ ದಿನಗಳಲ್ಲಿ ದಾವಣಗೆರೆಯೂ ಸೇರಿದಂತೆ, ರಾಜ್ಯದ ಕೇಂದ್ರಗಳಲ್ಲಿ ನಡೆದ ಸಮಾಜ ಘಾತುಕ ಶಕ್ತಿಗಳ ಪ್ರಚೋದನಕಾರಿ ಪ್ರದರ್ಶನದ ವಿರುದ್ಧ 'ಪ್ರತಿಭಟನೆ ನಡೆಯಲಿದೆ.

# ಹರ ಸೌಹಾರ್ದ ಸಹಕಾರಿಗೆ 79.40 ಲಕ್ಷ ರೂ. ನಿವ್ವಳ ಲಾಭ

## ಸದಸ್ಯರಿಗೆ ಶೇ.10 ಲಾಭಾಂಶ: 12ನೇ ಮಹಾಸಭೆಯಲ್ಲಿ ಅಧ್ಯಕ್ಷ ಬಿ.ಸಿ ಉಮಾಪತಿ ಘೋಷಣೆ




ದಾವಣಗೆರೆ,ಸೆ.17- ಅಭಿವೃದ್ಧಿ ಪಥದಲ್ಲಿ ಸಾಗಿರುವ ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘವು 2023-24ನೇ ಸಾಲಿನಲ್ಲಿ 79.40 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ. 10ರಷ್ಟು ಡಿವಿಡೆಂಡ್ ನೀಡಲಾಗುವುದು ಎಂದು ಸಂಘದ ಅಧ್ಯಕ್ಷ ಬಿ.ಸಿ.ಉಮಾಪತಿ ತಿಳಿಸಿದರು.

ನಗರದ ದಾವಣಗೆರೆ ಹರಿಹರ ಅರ್ಬನ್ ಬ್ಯಾಂಕಿನ ಸಹಕಾರ ಸಮುದಾಯ ಭವನದಲ್ಲಿ ಜರುಗಿದ ಸಹಕಾರಿಯ 12ನೇ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಠೇವಣಿ ಸಂಗ್ರಹ ಹಾಗೂ ಸಾಲ ವಸೂಲಾತಿಯಲ್ಲಿ ಗಮನಾರ್ಹ ಪ್ರಗತಿ ಕಂಡಿದ್ದು, ಇದಕ್ಕೆ ಸದಸ್ಯರ ಸಹಕಾರ ಪ್ರಮುಖ ಕಾರಣ ಎಂದು ತಿಳಿಸಿದರು.

ಷೇರು ಸಂಗ್ರಹಣೆಯಲ್ಲಿಯೂ ಸಹ ಗಮನಾರ್ಹ ಪ್ರಗತಿ ಕಂಡಿದ್ದು, ಸಹಕಾರಿಯು ಆರ್ಥಿಕ ವರ್ಷಾಂತ್ಯಕ್ಕೆ 1.64 ಕೋಟಿ ಷೇರು ಬಂಡವಾಳವನ್ನು ಹೊಂದಿದೆ. ಕಳೆದ ಸಾಲಿನಲ್ಲಿ 12.05 ಕೋಟಿ ರೂ ಗಳ ಠೇವಣಿ ಸಂಗ್ರಹವಾಗಿದ್ದು, ಆರ್ಥಿಕ ವರ್ಷಾಂತ್ಯಕ್ಕೆ 13.20 ಕೋಟಿ ರೂ ಗಳ ಠೇವಣಿ ಸಂಗ್ರಹವಾಗಿದೆ. ಪ್ರಸ್ತುತ ಸಹಕಾರಿಯು 13.53 ಕೋಟಿ ರೂಗಳ ಸಾಲವನ್ನು ಸದಸ್ಯರಿಗೆ ವಿತರಿಸಿದೆ ಎಂದು ತಿಳಿಸಿದರು.

ಸಹಕಾರಿಯ ಉಪಾಧ್ಯಕ್ಷ ಎಂ. ದೊಡ್ಡಪ್ಪ ಲಾಭ ವಿಲೇವಾರಿ ಬಗ್ಗೆ ಸಭೆಯ ಮುಂದೆ ವಿವರ ಮಂಡಿಸಿದರು. ನಿರ್ದೇಶಕ ಹೆಚ್. ಎಂ. ನಾಗರಾಜ್ ಆಹ್ವಾನ ಪತ್ರಿಕೆ ಮಂಡಿಸಿದರೆ, ಅಂದನೂರು ಮುರುಗೇಶಪ್ಪ ಸಾಮಾನ್ಯ ಸಭೆಯ ನಡಾವಳಿ ಓದಿದರು. ಕೈದಾಳ ಶಿವಶಂಕರ್ ಆಡಳಿತ ವರದಿಯನ್ನು, ಕಾರ್ಯದರ್ಶಿ ಕೆ.ಚನ್ನಮಲ್ಲಿಕಾರ್ಜುನ ಲಾಭ-ನಷ್ಟ ಮತ್ತು ಅಢಾವೆ ಪತ್ರಗಳನ್ನು ಹಾಗೂ ಸಹ ಕಾರ್ಯದರ್ಶಿ ಎಂ.ಮಲ್ಲಿಕಾರ್ಜುನ್ ಆಡಳಿತ ಮಂಡಳಿಯ ಪಾಲನಾ ವರದಿಗಳನ್ನು ಮಂಡಿಸಿದರು.

ವಿಶೇಷ ಆಹ್ವಾನಿತರಾದ ಕೆ. ಶಿವಕುಮಾರ್, ಮುಂಗಡ ಪತ್ರ ಮಂಡಿಸಿದರು.. ಬಾದಾಮಿ ಜಯಣ್ಣ, ಪ್ರಸಕ್ತ ವರ್ಷ ಸಹಕಾರಿಯೂ 16 ಕೋಟಿ ರೂ. ಠೇವಣಿ ಸಂಗ್ರಹಣೆ ಗುರಿ ಹೊಂದಿದ್ದು, 85 ಲಕ್ಷ ರೂ. ಲಾಭ ಗಳಿಕೆ ಗುರಿ ಹೊಂದಿದೆ ಎಂದರು.

ಸಹಕಾರಿಯ ಪ್ರವರ್ತಕ ಮಹಾಂತೇಶ ಒಣರೊಟ್ಟಿ, ಲೆಕ್ಕ ಪರಿಶೋಧಕ ಕೆ. ಎಸ್ ಮುರುಗೇಂದ್ರಪ್ಪ, ಆಸ್ತಿ ಮೌಲ್ಯಮಾಪಕ ಇಂಜಿನಿ ಯರ್ ಕೆ. ಆರ್ ರವಿಂದ್ರನಾಥ್, ಕಾನೂನು ಸಲಹೆಗಾರ ಬಿ. ಬಸವರಾಜ ಉಚ್ಚಂಗಿದುರ್ಗ, ಆಭರಣ ಮೌಲ್ಯಮಾಪಕ ಕೆ. ಕೊಟ್ರೇಶ್, ಹಿರಿಯ ಸಹಕಾರಿ ಡಿ.ವಿ ಪ್ರಕಾಶ್, ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಬಡದಾಳ್ ಅವರುಗಳನ್ನು ಗೌರವಿಸಲಾಯಿತು.

ನಿರ್ದೇಶಕರಾದ ಹೆಚ್.ವಿ ಪುಷ್ಪಾವತಿ, ಅನಿತಾ ಸಿ. ಪಿ, ಹಾಲೇಶ ಅಂಗಡಿ, ಚೈತನ್ಯಕುಮಾರ್ ಸಿ. ಬಿ ಅವರುಗಳು ಮಹಾಸಭೆಯ ವಿವಿಧ ಸ್ಥರಗಳಲ್ಲಿ ಕಾರ್ಯನಿರ್ವಹಿಸಿದರು.

ನಿರ್ದೇಶಕರುಗಳಾದ ಹೆಚ್.ಎಸ್. ಅವ್ವಣ್ಣಪ್ಪ, ಎಸ್.ಮಲ್ಲನಗೌಡ್ರು, ಎಸ್.ಎಂ. ಸ್ವಾಮಿ (ವಾಣಿ ಶಿವಣ್ಣ) ಉಪಸ್ಥಿತರಿದ್ದರು. ಯೋಗೇಶ ಹೆಚ್. ಎಸ್ ಸ್ವಾಗತಿಸಿದರು. ಹಾಲೇಶ್ ಅಂಗಡಿ ನಿರೂಪಿಸಿದರು. ಕೆ. ಮಲ್ಲಿಕಾರ್ಜುನ್ ವಂದಿಸಿದರು.

# ಕೊಮಾರನಹಳ್ಳಿ : ಪಿಎಂ ಆವಾಸ್ ಯೋಜನೆ ಮನೆ ಗೃಹ ಪ್ರವೇಶ



ಮಲೇಬೆನ್ನೂರು, ಸೆ.17 - ಕೊಮಾರನಹಳ್ಳಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ನಿರ್ಮಿಸಿರುವ ಲಲಿತಮ್ಮ ಮಂಜುನಾಥ್ ಎಂಬುವವರ ಮನೆಯನ್ನು ಮಂಗಳವಾರ ಶಾಸಕ ಬಿ.ಪಿ.ಹರೀಶ್ ಅವರು ಟೇಪ್ ಕತ್ತರಿಸಿ, ಹಕ್ಕು ಪತ್ರ ನೀಡಿ, ಗೃಹ ಪ್ರವೇಶ ಮಾಡುವ ಮೂಲಕ ಈ ಯೋಜನೆಯನ್ನು ಹರಿಹರ ತಾಲ್ಲೂಕಿನಲ್ಲಿ ಸಾಂಕೇತಿಕವಾಗಿ ಉದ್ಘಾಟಿಸಿದರು.

ಈ ವೇಳೆ ಹಾಜರಿದ್ದ ತಾ.ಪಂ ಇಓ ಸುಮಲತಾ ಮಾತನಾಡಿ, ಪ್ರಧಾನ ಮಂತ್ರಿ ಆವಾಜ್ ಯೋಜನೆಯಡಿ ಹರಿಹರ ತಾಲ್ಲೂಕಿನಲ್ಲಿ ಕಳೆದ ವರ್ಷ 509 ಮನೆಗಳ ನಿರ್ಮಾಣದ ಗುರಿ ಹೊಂದಲಾಗಿತ್ತು. ಇದರಲ್ಲಿ 123 ಮನೆಗಳು ಪೂರ್ಣಗೊಂಡಿದ್ದು, 250 ಮನೆಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಪೂರ್ಣಗೊಂಡಿರುವ ಒಂದು ಮನೆಯನ್ನು ಇಂದು ಸಾಂಕೇತಿಕವಾಗಿ ಗೃಹಪ್ರವೇಶ ಮಾಡಲಾಗಿದೆ. ಈ ವರ್ಷ 1029 ಮನೆಗಳನ್ನು ನಿರ್ಮಾಣ ಮಾಡುವ ಗುರಿ ಹೊಂದಿದ್ದೇವೆ ಎಂದರು.

ಪಿಡಿಓ ಶ್ರೀನಿವಾಸ್ ಮಾತನಾಡಿ, ಈ ಯೋಜನೆಯಡಿ ಹಿರೇಹಾಲಿವಾಣ ಗ್ರಾ.ಪಂ ವ್ಯಾಪ್ತಿಯ ಗ್ರಾಮಗಳಲ್ಲಿ 30 ಮನೆಗಳ ನಿರ್ಮಾಣಕ್ಕೆ ಗುರಿ ಹೊಂದಲಾಗಿದ್ದು, 12 ಎಸ್‌ಸಿ, 1 ಎಸ್‌ಟಿ, 17 ಜನ ಸಾಮಾನ್ಯ ವರ್ಗದವರಿಗೆ ಮನೆಗಳನ್ನು ನಿರ್ಮಾಣ ಮಾಡಲು ಆದೇಶ ಪತ್ರ ನೀಡಲಾಗಿದೆ. ಇದರಲ್ಲಿ ಈಗಾಗಲೇ 27 ಮನೆಗಳ ನಿರ್ಮಾಣ ಪೂರ್ಣಗೊಂಡಿವೆ ಎಂದರು.

ಗ್ರಾ. ಪಂ ಅಧ್ಯಕ್ಷರಾದ ಲಕ್ಷ್ಮೀದೇವಿ ಎಸ್. ಜಿ.ಮಂಜುನಾಥ್, ಉಪಾಧ್ಯಕ್ಷರಾದ ಕಮಲೀಬಾಯಿ ಪರಮೇಶ್‌ನಾಯ್ಕ್, ಜಿ.ಪಂ.ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ತಾ.ಪಂ.ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಗ್ರಾ. ಪಂ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಮಡಿವಾಳರ ಬಸವರಾಜ್, ಗ್ರಾ.ಪಂ ಸದಸ್ಯರಾದ ನೇತ್ರಾವತಿ ಹನುಮಂತಪ್ಪ, ದಿಬ್ಬದಹಳ್ಳಿ ಓಂಕಾರಪ್ಪ, ಪಿ.ಸಿ. ಮೋಹನ್, ಗ್ರಾಮದ ಮುಖಂಡರಾದ ದಾನಪ್ಪರ ಹನುಮಂತಪ್ಪ, ಐರಣಿ ಮಹೇಶ್ವರಪ್ಪ, ರಾಮಣ್ಣಸ್ವಾಮಿ, ಜಿ.ರಂಗಪ್ಪ, ಎಸ್.ಡಿ.ರಂಗನಾಥ್, ಹೋಟೇಲ್ ಪರಮೇಶ್ವರಪ್ಪ, ಎಸ್.ಗದಿಗೇಶ್, ಜಿ.ಸುನೀಲ್, ಜಿ.ಪಿ. ಹನುಮಗೌಡ ಮತ್ತಿತರರು ಈ ಸಂದರ್ಭದಲ್ಲಿ ಇದ್ದರು.

**ಚಾಲನೆ :** ಇದೇ ವೇಳೆ ಶಾಸಕ ಹರೀಶ್ ಅವರು, ಗ್ರಾಮದ ಮುಖ್ಯ ವೃತ್ತದಲ್ಲಿ ಕಸ ಗುಡಿಸುವ ಮೂಲಕ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದರು.

## 1 ರೂ. ಹೆಚ್ಚು, ಕೆಲಸಕ್ಕೆ ಆಪತ್ತು

ಮಹಾರಾಜ್‌ಗಂಜ್, ಸೆ. 17 - ಉತ್ತರ ಪ್ರದೇಶದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಗುತ್ತಿಗೆ ಉದ್ಯೋಗಿಯೊಬ್ಬರು ನಿಗದಿತ 1 ರೂ. ಶುಲ್ಕದ ಬದಲು 2 ರೂ. ಪಡೆದಿದ್ದು ಆತನ ಕೆಲಸಕ್ಕೆ ಕುತ್ತು ತಂದಿದೆ.

ಸ್ಥಳೀಯ ಬಿಜೆಪಿ ಶಾಸಕ ಪ್ರೇಮ್ ಸಾಗರ್ ಪಟೇಲ್ ಅವರು ಜಗ್ದೌರ್ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ನಿಗದಿತ ಹಣಕ್ಕಿಂತ ಹೆಚ್ಚು ಪಡೆಯುತ್ತಿದ್ದುದು ಕಂಡು ಬಂದಿತ್ತು.

ಬಡ ರೋಗಿಗಳಿಂದ ಹೆಚ್ಚು ಹಣ ಪಡೆಯುತ್ತಿದ್ದ ಬಗ್ಗೆ ಶಾಸಕರು ಅಸಮಾಧಾನ ವ್ಯಕ್ತಪಡಿಸಿ ಉದ್ಯೋ ಗಿಯ ವಿರುದ್ಧ ಹರಿ ಹಾಯ್ದಿದ್ದರು. ಈ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ನಂತರ ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗಳು ಸಂಜಯ್ ಎಂಬ ಗುತ್ತಿಗೆ ಉದ್ಯೋಗಿಯನ್ನು ವಜಾಗೊಳಿಸಿದ್ದಾರೆ.

**ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ**

ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಇಂದಿನಿಂದ ಇದೇ ದಿನಾಂಕ 22ರವರೆಗೆ ಉಚಿತ ಓಶೋ ಧ್ಯಾನ ಶಿಬಿರ ನಡೆಯಲಿದೆ ಎಂದು ಪುಷ್ಪ (9036719573), ಅರ್ಚನ (9738572318) ತಿಳಿಸಿದ್ದಾರೆ.





## ಪ್ಯಾಲೆಸ್ತೇನ್ ಬಾವುಟದ ಸ್ಟಿಕ್ಕರ್

**ದೂರು ದಾಖಲು**

ದಾವಣಗೆರೆ, ಸೆ. 17 - ಈದ್ ಮಿಲಾದ್ ಮೆರವಣಿಗೆ ವೇಳೆ ಗಾಂಧಿ ವೃತ್ತದ ಬಳಿ ಸಂಜೆ ಯಾರೋ ಒಬ್ಬ ವ್ಯಕ್ತಿ ತನ್ನ ಅಂಗಿ ಮೇಲೆ ಪ್ಯಾಲೇಸ್ತೇನ್ ದೇಶದ ಬಾವುಟದ ಸ್ಟಿಕ್ಕರ್ ಹಾಕಿಕೊಂಡು ಜಾತಿ, ಕೋಮುಗಳ ನಡುವೆ ದ್ವೇಷ ಉಂಟು ಮಾಡಿ ಸಾರ್ವಜನಿಕ ಶಾಂತಿ ಕದಡುವ ಸಾಧ್ಯತೆ ಇರುವುದರಿಂದ ಆ ವ್ಯಕ್ತಿಯನ್ನು ಪತ್ತೆ ಮಾಡಿ ಕ್ರಮ ಕೈಗೊಳ್ಳುವಂತೆ ಬಿ.ನಾಗರಾಜ್ ಬಡಾವಣೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

## ರಾಣೇಬೆನ್ನೂರಿನಲ್ಲಿ ನೀರು ಪೂರೈಕೆ ಇಲ್ಲ

ಇಂದು ಮತ್ತು ನಾಳೆ ನಗರಕ್ಕೆ ನೀರು ಸರಬರಾಜು ಇರುವುದಿಲ್ಲ ಎಂದು ವಿಭಾಗದ ಅಧಿಕಾರಿ ಶೇಖರ ಹಾದಿಮನಿ ತಿಳಿಸಿದ್ದಾರೆ.







## ನಗರದಲ್ಲಿ ನಾಳೆ ರಾಜ್ಯ ರೈತ ಸಂಘದ ಕಾರ್ಯಕಾರಿಣಿ

ದಾವಣಗೆರೆ, ಸೆ. 17 - ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯ ಕಾರ್ಯಕಾರಿಣಿ ನಾಡಿದ್ದು ದಿನಾಂಕ 19 ರಂದು ನಗರದ ಎಪಿಎಂಸಿ ಸಭಾಂಗಣದಲ್ಲಿ ನಡೆಯಲಿದೆ. ಬೆಳಿಗ್ಗೆ 10.30ಕ್ಕೆ ನಡೆಯುವ ಕಾರ್ಯಕಾರಿಣಿಯಲ್ಲಿ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅಧ್ಯಕ್ಷತೆ ವಹಿಸುವರು.

ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾ, ತಾಲ್ಲೂಕು ಪದಾಧಿಕಾರಿಗಳು ಕಾರ್ಯಕಾರಿಣಿಯಲ್ಲಿ ಪಾಲ್ಗೊಳ್ಳುವರು.

## ರಫ್ತು ಶೇ.9.3ರಷ್ಟು ಕುಸಿತ

ನವದೆಹಲಿ, ಸೆ. 17 - ಕಳೆದ ಆಗಸ್ಟ್ ತಿಂಗಳಲ್ಲಿ ರಫ್ತು 13 ತಿಂಗಳಲ್ಲೇ ಅತಿ ಹೆಚ್ಚಿನ ಶೇ. 9.3ರಷ್ಟು ಕುಸಿತ ಕಂಡಿದೆ. ಜಾಗತಿಕ ಮಾರುಕಟ್ಟೆಯಲ್ಲಿನ ಅನಿಶ್ಚಿತತೆ ಕಾರಣದಿಂದಾಗಿ ರಫ್ತು ಪ್ರಮಾಣ 34.71 ಶತಕೋಟಿ ಡಾಲರ್‌ಗಳಿಗೆ ಸೀಮಿತವಾಗಿದೆ.

ಇದೇ ವೇಳೆ ವ್ಯಾಪಾರಿ ಕೊರತೆ 10 ತಿಂಗಳಲ್ಲೇ ಅತಿ ಹೆಚ್ಚಿನ 29.65 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಆಗಸ್ಟ್ ತಿಂಗಳಲ್ಲಿ ಆಮದು ಪ್ರಮಾಣ 64.36 ಶತಕೋಟಿ ಡಾಲರ್ ಆಗಿತ್ತು. ಬಂಗಾರ ಹಾಗೂ ಬೆಳ್ಳಿ ಆಮದು ಹೆಚ್ಚಾಗಿರುವುದೇ ಇದಕ್ಕೆ ಪ್ರಮುಖ ಕಾರಣ.




**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

ಶಾಂತಲಾ
ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327




KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas